
24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 151 | ನವದೆಹಲಿ | ಬೆಲೆ ₹10 | ನವಂಬರ್ 28, 2026 ಶನಿವಾರ



ಸಮಾಜದಿಂದ ಪಡೆದಿದ್ದನ್ನು ಸಮಾಜದ ಕಲ್ಯಾಣಕ್ಕೆ ಮರಳಿಸುವುದೇ ನೈಜ ಸಿಎಸ್‌ಆರ್: ರಾಜ್ಯಪಾಲೆ ಡಾ.ಸುಧಾ ಯಾದವ್ ಅಭಿಮತ

ಬಿಸಿಐಸಿ ಸಂಸ್ಥೆ ಸುವರ್ಣ ಮಹೋತ್ಸವ ಹಾಗೂ ಬಿಸಿಐಸಿ ಸಿಎಸ್‌ಆರ್ ಸಮಾವೇಶದಲ್ಲಿ ಭಾಗಿ



ಬೆಂಗಳೂರು, ನ.27: ಸಮಾಜದಿಂದ ಪಡೆದ ಸಂಪತ್ತನ್ನು ಸಮಾಜದ ಕಲ್ಯಾಣಕ್ಕಾಗಿ ಮರಳಿಸುವ ಮನೋಭಾವ ಪ್ರತಿಯೊಂದು ಉದ್ಯಮದಲ್ಲಿಯೂ ಇರಬೇಕು. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಕಾನೂನುಬದ್ಧ ಬಾಧ್ಯತೆಯ ಜೊತೆಗೆ ಸಮಾಜದ ಭವಿಷ್ಯ ಮತ್ತು ಅಭಿವೃದ್ಧಿ ಹೊಂದಿದ ಭಾರತದ ನಿರ್ಮಾಣಕ್ಕೆ ಮಾಡುವ ಮಹತ್ವದ ಹೂಡಿಕೆಯಾಗಬೇಕು ಎಂದು ರಾಜ್ಯಪಾಲೆ ಡಾ.ಸುಧಾ ಯಾದವ್ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಶನಿವಾರ ಬೆಂಗಳೂರು ಚೇಂಬರ್ ಆಫ್ ಇಂಡಸ್ಟ್ರಿ ಅಂಡ್ ಕಾಮರ್ಸ್ (ಬಿಸಿಐಸಿ) ವತಿಯಿಂದ ಬಿಸಿಐಸಿ ಸಂಸ್ಥೆಯ ಸುವರ್ಣ ಮಹೋತ್ಸವ ಹಾಗೂ ಬಿಸಿಐಸಿ ಸಿಎಸ್‌ಆರ್ ಸಮಾವೇಶ ಮಾತನಾಡಿ, "ಭಾರತೀಯ ಸಂಸ್ಕೃತಿಯಲ್ಲಿ ಸಮಾಜ ಸೇವೆ ಮತ್ತು ಪರೋಪಕಾರದ ಪರಿಕಲ್ಪನೆ ಹೊಸತಲ್ಲ. 'ಪರೋಪಕಾರಾಯ ಸತಾಂ ವಿಭೂತಯಃ' ಎಂಬ ನುಡಿಯಂತೆ, ಸಜ್ಜನರ ಸಂಪತ್ತು ಸಮಾಜದ ಕಲ್ಯಾಣಕ್ಕಾಗಿ ಬಳಕೆಯಾಗಬೇಕು ಎಂಬ ಮೌಲ್ಯ ನಮ್ಮ ಪರಂಪರೆಯಲ್ಲಿ ಶತಮಾನಗಳಿಂದಲೂ ಇದೆ. ಕೌಟಿಲ್ಯನ ಅರ್ಥಶಾಸ್ತ್ರದಿಂದ ಹಿಡಿದು ವೇದಕಾಲದ ದಾನ ಮತ್ತು ಧರ್ಮದ ತತ್ವಗಳವರೆಗೆ ವ್ಯಾಪಾರ ಮತ್ತು ಸಮಾಜದ ನಡುವಿನ ಸಂಬಂಧ ಗಾಢವಾಗಿದೆ" ಎಂದು ಹೇಳಿದರು.

'ಸಬ್ಕಾ ಸಾಥ್, ಸಬ್ಕಾ ವಿಕಾಸ್' ಎಂಬ ಆಶಯ ಸಾಕಾರಗೊಳ್ಳಲು ಸರ್ಕಾರದ ಪ್ರಯತ್ನಗಳ ಜೊತೆಗೆ ಸಮಾಜ ಮತ್ತು ಕಾರ್ಪೊರೇಟ್ ವಲಯದ ಸಕ್ರಿಯ ಸಹಭಾಗಿತ್ವ ಅಗತ್ಯ. ಸಮಾಜದ ಎಲ್ಲ ವರ್ಗಗಳ ಸಹಯೋಗದೊಂದಿಗೆ ನಡೆಯುವ ಸಮಗ್ರ ಪ್ರಯತ್ನಗಳೇ ಹೊಸ ಭಾರತದ ನಿರ್ಮಾಣಕ್ಕೆ ಶಕ್ತಿಯಾಗಲಿವೆ ಎಂದರು. ಪ್ರಸಿದ್ಧ ಉದ್ಯಮಿ ಜೆ.ಆರ್.ಡಿ. ಟಾಟಾ ಅವರ ಮಾತುಗಳನ್ನು ಉಲ್ಲೇಖಿಸಿದ ರಾಜ್ಯಪಾಲರು, ಸಾಮಾಜಿಕ ಹೊಣೆಗಾರಿಕೆಯ ಮೂಲ ಆಶಯವಾಗಬೇಕು" ಎಂದು ಹೇಳಿದರು.

ಸಿಎಸ್‌ಆರ್ ಕ್ಷೇತ್ರದಲ್ಲಿ ಭಾರತ ಮಹತ್ವದ ಹೆಜ್ಜೆ ಇಟ್ಟಿದ್ದರೂ, ಅನುದಾನಗಳ ಅಸಮಾನ ಹಂಚಿಕೆ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸೀಮಿತ ಭಾಗವಹಿಸುವಿಕೆ ಹಾಗೂ ಯೋಜನೆಗಳ ದೀರ್ಘಕಾಲೀನ ಪರಿಣಾಮಗಳ ಸಮರ್ಪಕ ಮೌಲ್ಯಮಾಪನದ ಕೊರತೆಯಂತಹ ಸವಾಲುಗಳಿವೆ. ಇವುಗಳನ್ನು ಪರಿಹರಿಸಲು ಉದ್ಯಮ ಸಂಸ್ಥೆಗಳು ಮತ್ತು ಕೈಗಾರಿಕಾ ಸಂಘಟನೆಗಳು ಒಗ್ಗೂಡಿ ಕಾರ್ಯ ನಿರ್ವಹಿಸಬೇಕು ಎಂದು ಕರೆ ನೀಡಿದರು.

ಭಾರತವು ಅಭಿವೃದ್ಧಿಯ ಹೊಸ ಮೈಲಿಗಲ್ಲುಗಳನ್ನು ಸಾಧಿಸುತ್ತಿರುವ ಈ ಸಂದರ್ಭದಲ್ಲಿ, ಮುಂದಿನ ಪೀಳಿಗೆಗೆ ಉತ್ತಮ ಅವಕಾಶಗಳು, ಸಮಾನತೆ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಒಳಗೊಂಡ ರಾಷ್ಟ್ರವನ್ನು ನಿರ್ಮಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಉದ್ಯಮ ವಲಯವು ತನ್ನ ಸಾಮಾಜಿಕ ಹೊಣೆಗಾರಿಕೆಯನ್ನು ಅರಿತು, ಸಿಎಸ್‌ಆರ್ ಮೂಲಕ ಅಭಿವೃದ್ಧಿ ಹೊಂದಿದ ಭಾರತದ ಕನಸಿಗೆ ಅರ್ಥಪೂರ್ಣ ಕೊಡುಗೆ ನೀಡಬೇಕು ಎಂದು ರಾಜ್ಯಪಾಲರು ಕರೆ ನೀಡಿದರು.

ಉದಾತ್ತ ಪರಂಪರೆಗೆ ಕರ್ನಾಟಕ ಸಾಕ್ಷಿ

ಕರ್ನಾಟಕದ ಇತಿಹಾಸವೂ ಈ ಉದಾತ್ತ ಪರಂಪರೆಗೆ ಸಾಕ್ಷಿಯಾಗಿದೆ. ಐತಿಹಾಸಿಕ ದೇವಾಲಯಗಳು, ಕಲ್ಯಾಣಿಗಳು, ಕೆರೆಗಳು ಹಾಗೂ ಶಿಕ್ಷಣ ಸಂಸ್ಥೆಗಳ ನಿರ್ಮಾಣದಲ್ಲಿ ಪ್ರಾಚೀನ ವ್ಯಾಪಾರಿ ಸಂಘಗಳು ಮಹತ್ವದ ಕೊಡುಗೆ ನೀಡಿವೆ. 12ನೇ ಶತಮಾನದಲ್ಲಿ ಬಸವಣ್ಣನವರು ಪ್ರತಿಪಾದಿಸಿದ 'ಕಾಯಕ' ಮತ್ತು 'ದಾಸೋಹ' ತತ್ವಗಳು ಇಂದಿನ ಸಿಎಸ್‌ಆರ್ ಪರಿಕಲ್ಪನೆಗೆ ಅತ್ಯಂತ ಸೂಕ್ತವಾದ ಮಾದರಿಗಳಾಗಿವೆ. ಮಹಾತ್ಮ ಗಾಂಧೀಜಿಯವರ ಟ್ರಸ್ಟೀಶಿಪ್ ಸಿದ್ಧಾಂತವೂ ಇದೇ ಆಶಯವನ್ನು ಪ್ರತಿಪಾದಿಸುತ್ತದೆ" ಎಂದು ಸುಧಾ ಯಾದವ್ ವಿವರಿಸಿದರು.

"ಸಮಾಜದಿಂದ'ನಾವು ಪಡೆಯುವುದನ್ನು ಹಲವು ಪಟ್ಟು ಹೆಚ್ಚಿಸಿ ಸಮಾಜಕ್ಕೇ ಮರಳಿಸಬೇಕು ಎಂಬುದು ಉದ್ಯಮಗಳ

ನಿತ್ಯ ಪಂಚಾಂಗ 28.11.2026 ಶನಿವಾರ



ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯನ ಶರದ್ ಋತು/ಚಾಂದ್ರಮಾನ ಆಶ್ವಯುಜ-ಕಾರ್ತಿಕ ಮಾಸ

ಕಾರ್ತಿಕ ಬಹುಳ,ಚೌತಿ. ಪುನರ್ವಸು ನಕ್ಷತ್ರ 4ನೇ ಶನಿವಾರ ಕುಶಾಲನಗರ ಗಣಪತಿ ರಥ, ವಾಡೆ ರಮಾನಂದಸ್ವಾಮಿ ಆರಾಧನೆ, ಹಿಪ್ಪರಗಿ ಸಂಗಮೇಶ್ವರ ಸಪ್ತಾಹ ಆರಂಭ

ದಿನ	ರಾಹುಕಾಲ	ಯಮಗಂಡ	ಗುಳಿಕಕಾಲ
	ರಾಹುಕಾಲ	ಯಮಗಂಡ	ಗುಳಿಕಕಾಲ
ಭಾನು	4.30 – 6.00	12.00 – 1.30	3.00 – 4.30
ಸೋಮ	7.30 – 9.00	10.30 – 12.00	1.30 – 3.00
ಮಂಗಳ	3.00 – 4.30	9.00 – 10.30	12.00 – 1.30
ಬುಧ	12.00 – 1.30	7.30 – 9.00	10.30 –12.00
ಗುರು	1.30 – 3.00	6.00 – 7.30	9.00 –10.30
ಶುಕ್ರ	10.30 –12.00	3.00 – 4.30	7.30 – 9.00
ಶನಿ	9.00 –10.30	1.30 – 3.00	6.00 – 7.30

ಅಧಿವೇಶನದ ವೇಳೆ ಶಾಸಕರು ಪ್ರತ್ಯೇಕವಾಗಿ ಚರ್ಚೆ ನಡೆಸುವುದು ಬಣ ರಾಜಕೀಯವಲ್ಲ

ನಾಯಕತ್ವದ ಬಗ್ಗೆ ಯಾವುದೇ ಅಸಮಾಧಾನವಿಲ್ಲ: ಸಚಿವ ಸತೀಶ್ ಜಾರಕಿಹೊಳಿ



ಬೆಂಗಳೂರು, ನ.27: ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಕಾಂಗ್ರೆಸ್ ಶಾಸಕರು ಪ್ರತ್ಯೇಕವಾಗಿ ಸಭೆ ಸೇರಿ ಊಟ ಮಾಡುವುದು ಅಥವಾ ಚರ್ಚೆ ನಡೆಸುವುದನ್ನು ಬಣ ರಾಜಕೀಯ ಎಂದು ಪರಿಗಣಿಸುವ ಅಗತ್ಯವಿಲ್ಲ. ನಾಯಕತ್ವದ ಬಗ್ಗೆ ಯಾವುದೇ ಅಸಮಾಧಾನವೂ ಇಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದರು.

ಅಧಿವೇಶನದ ವೇಳೆ ಶಾಸಕರು ಜಿಲ್ಲಾವಾರು ಅಥವಾ ಪ್ರತ್ಯೇಕವಾಗಿ ಸೇರಿ ಸಭೆ ನಡೆಸಿ ಊಟ ಮಾಡಿದರೆ ಅದನ್ನು ವಿರೋಧ ಅಥವಾ ಬಣ ರಾಜಕೀಯ ಎಂದು ಅರ್ಥೈಸಬಾರದು. ನಾಯಕತ್ವದ ಬಗ್ಗೆ ಯಾವುದೇ ಅಸಮಾಧಾನವಿಲ್ಲ ಎಂದರು.

ಕೆಪಿಸಿಸಿ ಅಧ್ಯಕ್ಷರನ್ನು ಭೇಟಿ ಮಾಡಿದ ವಿಚಾರವಾಗಿ ಮಾತನಾಡಿದ ಅವರು, ಪಕ್ಷ ಸಂಘಟನೆಗೆ ಉತ್ತಮ ಕಾರ್ಯಕರ್ತರನ್ನು ಗುರುತಿಸಿ ಅವಕಾಶ ನೀಡಬೇಕು. ನಮ್ಮ ಕಾರ್ಯಕರ್ತರಿಗೂ ಆದ್ಯತೆ ನೀಡುವಂತೆ ಮನವಿ ಮಾಡಲು ಹೋಗಿದ್ದೆವು. ಅಧ್ಯಕ್ಷರನ್ನು ಮತ್ತು ನಮ್ಮ ಕಾರ್ಯಕರ್ತರನ್ನು ಭೇಟಿ ಮಾಡಲು ಈ ಹಿಂದೆ ಸೂಕ್ತ ಅವಕಾಶ ಸಿಕ್ಕಿರಲಿಲ್ಲ ಎಂದರು.

ಉತ್ತರ ಕರ್ನಾಟಕ ಅಭಿವೃದ್ಧಿ ಚರ್ಚೆಗೆ ಆದ್ಯತೆ ಅಗತ್ಯ

ಬೆಳಗಾವಿ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಸಮಸ್ಯೆಗಳು ಮತ್ತು ಅಭಿವೃದ್ಧಿ ಕುರಿತು ಸಮಗ್ರ ಚರ್ಚೆಯಾಗಬೇಕು. ಬಿಜೆಪಿ ಸದಸ್ಯರು ಧರಣಿ ನಡೆಸುತ್ತಾರೆ. ಅಧಿವೇಶನದ ಎರಡು ದಿನಗಳಲ್ಲಿ ಗದ್ದಲ ಉಂಟಾಗುವ ಬದಲು ಈ ಭಾಗದ ಸಮಸ್ಯೆಗಳಿಗೆ ಆದ್ಯತೆ ನೀಡಬೇಕು ಎಂದು ಹೇಳಿದರು.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ಬದಲಾವಣೆ ಕುರಿತು ಸದ್ಯಕ್ಕೆ ಯಾವುದೇ ಪ್ರಶ್ನೆಯಿಲ್ಲ. ರಣದೀಪ್ ಸಿಂಗ್ ಸುರ್ಜೇವಾಲ ಅವರೇ ಉಸ್ತುವಾರಿಯಾಗಿದ್ದು, ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ ಎಂದರು. ಕೆಪಿಸಿಸಿ ಉಪಾಧ್ಯಕ್ಷರು ಮತ್ತು ಕಾರ್ಯಾಧ್ಯಕ್ಷರ ನೇಮಕದ ಬಗ್ಗೆ ಚರ್ಚೆಯಾಗಿದೆ. ಲಕ್ಷ್ಮೀ ಹೆಬ್ಬಾಳ್ಕರ್ ಅವರನ್ನು ಕಾರ್ಯಾಧ್ಯಕ್ಷರನ್ನಾಗಿ ಮಾಡುವ ವಿಚಾರ ನನಗೆ ತಿಳಿದಿಲ್ಲ ಎಂದು ಹೇಳಿದರು.

ಗುತ್ತಿಗೆದಾರರ ಬಾಕಿ

ಹಿಂದಿನ ಬಿಜೆಪಿ ಸರ್ಕಾರ ಗುತ್ತಿಗೆದಾರರಿಗೆ 12 ಸಾವಿರ ಕೋಟಿ ಬಾಕಿ ಉಳಿಸಿತ್ತು. ನಮ್ಮ ಸರ್ಕಾರ ಈಗಾಗಲೇ 9 ಸಾವಿರ ಕೋಟಿ ಪಾವತಿಸಿದ್ದು, ಇನ್ನೂ 3 ಸಾವಿರ ಕೋಟಿ ಬಾಕಿ ಇದೆ. ಬಜೆಟ್‌ನಲ್ಲಿ ಅನುದಾನ ಇಲ್ಲದಿದ್ದರೂ ಹಣ ಬಿಡುಗಡೆ ಮಾಡಿಸಲಾಗಿದೆ ಎಂದು ತಿಳಿಸಿದರು.

ಆಶಾ ಕಾರ್ಯಕರ್ತರ ಬಗ್ಗೆ ಮಾತನಾಡುವ ನೈತಿಕತೆ ಎನ್‌ಡಿಎ ನಾಯಕರಿಗೆ ಇಲ್ಲ



ಬೆಂಗಳೂರು, ನ.27: ಆಶಾ ಕಾರ್ಯಕರ್ತೆಯರ ಬಗ್ಗೆ ಮಾತನಾಡುವ ನೈತಿಕತೆ ಎನ್‌ಡಿಎ ನಾಯಕರಿಗೆ ಇಲ್ಲ. ಅವರಿಗೆ ಆಶಾ ಕಾರ್ಯಕರ್ತೆಯರ ಬಗ್ಗೆ ಕಾಳಜಿ ಇದ್ದರೆ ಕೇಂದ್ರ ಸರ್ಕಾರ ನೀಡಬೇಕಿರುವ ಹಣದ ಬಗ್ಗೆ ಧ್ವನಿ ಎತ್ತಲಿ. ಇದುವರೆಗೂ ಕುಮಾರಸ್ವಾಮಿ ಹಾಗೂ ಬಿಜೆಪಿ ನಾಯಕರು ಈ ವಿಚಾರವಾಗಿ ಮಾತನಾಡಿಲ್ಲ ಎಂದು ಸಿಎಂ ಡಿ.ಕೆ.ಶಿವಕುಮಾರ್ ಕಿಡಿಕಾರಿದರು.

ಕೆಂಗೇರಿಯ ಬಿಜೆಎಸ್ ಮೈದಾನದ ಬಳಿ ಮಾಧ್ಯಮಗಳ ಜತೆ ಶುಕ್ರವಾರ ಮಾತನಾಡಿ, ನಾನು ಎನ್‌ಡಿಎಯ ಯಾವುದೇ ನಾಯಕರ ಹೇಳಿಕೆಗೆ ಉತ್ತರ ನೀಡುವುದಿಲ್ಲ. ಕೇಂದ್ರ ಸರ್ಕಾರ ಆಶಾ ಕಾರ್ಯಕರ್ತೆಯರಿಗೆ ಈವರೆಗೂ 1 ರೂ. ಹೆಚ್ಚಳ ಮಾಡಿಲ್ಲ. ಅವರ ವೇತನ ಹೆಚ್ಚಳ ಮಾಡಿರುವುದು ನಾವು. ಆಶಾ ಕಾರ್ಯಕರ್ತೆಯರ ವಿಚಾರದಲ್ಲಿ ರಾಜಕೀಯ ಮಾಡಲ್ಲ. ಆಶಾ ಕಾರ್ಯಕರ್ತೆಯರ ಯೋಜನೆ ತಂದಿದ್ದು ಮನಮೋಹನ್ ಸಿಂಗ್. ಆಶಾ ಕಾರ್ಯಕರ್ತೆಯರ ಪರವಾಗಿ ಕಾಂಗ್ರೆಸ್ ಸರ್ಕಾರ ಇದ್ದರೆ, ಬಿಜೆಪಿಗೆ ಬಿಜೆಪಿಗೆ ಅವರ ಬಗ್ಗೆ ದ್ವೇಷ ಇದೆ. ಹೀಗಾಗಿ ಹೆಚ್ಚು ಮಾತನಾಡುತ್ತಿಲ್ಲ ಎಂದರು.

ಕೆಲವರು ರಾಜಕೀಯ ಮಾಡುತ್ತಿದ್ದಾರೆ ಎಂದು ಕೇಳಿದಾಗ, ರಾಜಕಾರಣ ಮಾಡುವವರು ಮಾಡಲಿ. ನನ್ನ ಅಭ್ಯಂತರವಿಲ್ಲ. ಆಶಾ ಕಾರ್ಯಕರ್ತೆಯರು ನಮ್ಮ ಸಹೋದರಿಯರು. ಅವರ ಬಗ್ಗೆ ಕಾಳಜಿ ಇದೆ. ನೀವು ಪ್ರತಿಭಟನೆ ಕೈಬಿಡಿ ಎಂದು ನಾನು ಮತ್ತೊಮ್ಮೆ ವಿನಯದಿಂದ ಮನವಿ ಮಾಡುವೆ. ನಾನು ಎಲ್ಲರನ್ನು ಕರೆದು ತೀರ್ಮಾನ ಮಾಡುವೆ ಎಂದರು.

ಆಶಾ ಕಾರ್ಯಕರ್ತೆಯರ ವೇತನ ಹೆಚ್ಚಳ ಬಗ್ಗೆ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದ್ದಿರಿ ಎಂದು ಕೇಳಿದಾಗ, ಹೌದು, ನಾವು ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದು, ನಾವು ನುಡಿದಂತೆ ನಡೆಯುತ್ತೇವೆ. ಕೇಂದ್ರ ಸರ್ಕಾರ ತನ್ನ ಪಾಲಿನ ಮೊತ್ತವನ್ನು ಹೆಚ್ಚಳ ಮಾಡಲು ಅವರು ಒತ್ತಡ ಹಾಕಲಿ ಎಂದು ಸವಾಲೆಸೆದರು.

ಸಹಿ ಹಾಕಲೇಬೇಕು ಎಂದು ಪಟ್ಟುಹಿಡಿದರೆ ಅದು ಸಾಧ್ಯವಿಲ್ಲ

ನಿಮ್ಮ ಮೇಲೆ ನಮಗೆ ನಂಬಿಕೆ ಇದೆ. ನಮಗೆ ಅವಕಾಶ ಕೊಟ್ಟರೆ ನಮ್ಮ ಕೆಲಸ ಮಾಡಲು ಸಿದ್ಧರಿದ್ದೇವೆ ಎಂದು ಅನೇಕ ಆಶಾ ಕಾರ್ಯಕರ್ತೆಯರು ಕರೆ ಹಾಗೂ ಸಂದೇಶದ ಮೂಲಕ ಹೇಳುತ್ತಿದ್ದಾರೆ. ಆಶಾ ಕಾರ್ಯಕರ್ತೆಯರಲ್ಲೇ ಬಿರುಕು ತರಬಾರದು ಎಂಬ ಉದ್ದೇಶಕ್ಕೆ ನಾನು ಕೂಡ ಮೌನವಾಗಿದ್ದೇನೆ. ನಿಮ್ಮ ಕಷ್ಟಗಳ ಬಗ್ಗೆ ಅರಿವಿದೆ. ನೀವು ನಿಮ್ಮ ಕೆಲಸದಲ್ಲಿ ತೊಡಗಿ. ನೀವು ಸೇವೆಯ ಉದ್ದೇಶದಿಂದ ಬಂದಿದ್ದು, ಹೋರಾಟಕ್ಕಲ್ಲ. ಹೋರಾಟ ಎಲ್ಲರ ಹಕ್ಕು ಇದೆ. ನಾವು ನಿಮ್ಮ ಜತೆ ಚರ್ಚೆ ಮಾಡುತ್ತೇನೆ. ದಿನೇಶ್ ಗುಂಡೂರಾವ್, ಸಿದ್ದರಾಮಯ್ಯ ಅವರು ನಿಮ್ಮ ಜತೆ ಏನು ಮಾತನಾಡಿದ್ದಾರೆ ಎಂಬ ಅರಿವು ನನಗಿದೆ. ಆದರೆ ಸಹಿ ಹಾಕಲೇಬೇಕು ಎಂದು ಪಟ್ಟುಹಿಡಿದರೆ ಅದು ಸಾಧ್ಯವಿಲ್ಲ. ನನ್ನ ಮೇಲೆ ವಿಶ್ವಾಸ ಇಟ್ಟರೆ ಖಂಡಿತವಾಗಿ ಸಹಾಯ ಮಾಡುವೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಖಾಲಿಯಿರುವ ಸಚಿವ ಸ್ಥಾನದಲ್ಲಿ ಒಂದು ಮಹಿಳೆಗೆ, ಮತ್ತೊಂದು ಹಿಂದುಳಿದ ವರ್ಗಕ್ಕೆ: ಮಾಜಿ ಸಿಎಂ ಸಿದ್ದರಾಮಯ್ಯ ಆಗ್ರಹ



ಬೆಂಗಳೂರು, ನ.27: ರಾಜ್ಯ ಸಚಿವ ಸಂಪುಟದಲ್ಲಿ ಖಾಲಿ ಇರುವ ಎರಡು ಸ್ಥಾನಗಳಲ್ಲಿ ಒಂದನ್ನು ಮಹಿಳೆಗೆ ಹಾಗೂ ಮತ್ತೊಂದನ್ನು ಹಿಂದುಳಿದ ವರ್ಗಕ್ಕೆ ನೀಡಬೇಕು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಶಾಸಕರ ಭವನದಲ್ಲಿ ಮಾತನಾಡಿದ ಅವರು, ಮಾಜಿ ಸಚಿವ ಬಿ. ನಾಗೇಂದ್ರ ನಿರಪರಾಧಿ ಎಂದು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಅವರಿಗೆ ಕ್ಲೀನ್‌ಚಿಟ್ ಸಿಕ್ಕಿರುವ ವಿಚಾರವೂ ಇದೆ ಎಂದರು. ಆದರೆ ನಾಗೇಂದ್ರ ಅವರಿಗೆ ಮತ್ತೆ ಸಚಿವ ಸ್ಥಾನ ನೀಡಬೇಕೆಂಬ ಪ್ರಶ್ನೆಗೆ ಪ್ರತಿಕ್ರಿಯಿಸಲು ನಿರಾಕರಿಸಿದರು.

ಮೈಸೂರಿನಲ್ಲಿ ಆಪ್ತ ಶಾಸಕರೊಂದಿಗೆ ಒಗ್ಗಟ್ಟು ಪ್ರದರ್ಶಿಸಿದ ವಿಚಾರವಾಗಿ ಪ್ರತಿಕ್ರಿಯಿಸಿ, ನಾವು ಯಾವಾಗ ಜಗಳವಾಡಿದ್ದೇವೆ ಯಾವಾಗ ಬೇರೆ ಬೇರೆಯಾಗಿದ್ದೇವೆ ಎಂದು ಪ್ರಶ್ನಿಸಿದರು.

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹಸು ಭಾಗ್ಯ ಯೋಜನೆ ಜಾರಿಗೆ ತರುವ ವಿಚಾರವಾಗಿ, ತಮ್ಮ ಸರ್ಕಾರದ ಅವಧಿಯಲ್ಲಿ ಪಶುಭಾಗ್ಯ, ಕ್ಷೀರಭಾಗ್ಯ ಮತ್ತು ಕ್ಷೀರಧಾರೆ ಯೋಜನೆಗಳನ್ನು ಜಾರಿಗೊಳಿಸಲಾಗಿತ್ತು. ಕುಮಾರಸ್ವಾಮಿ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದಾಗ ಇಂತಹ ಯೋಜನೆಗಳನ್ನು ಏಕೆ ಜಾರಿಗೆ ತರಲಿಲ್ಲ ಎಂದು ಪ್ರಶ್ನಿಸಿದರು.

ಅನುದಾನದ ಸಮಸ್ಯೆಯಿರಬಹುದು, ಖಜಾನೆ ಖಾಲಿಯಾಗಿದೆ ಎಂದಲ್ಲ

ಗ್ಯಾರಂಟಿ ಯೋಜನೆಗಳಿಂದ ಸರ್ಕಾರದ ಖಜಾನೆ ಖಾಲಿಯಾಗಿದೆ ಎಂಬ ಆರೋಪವನ್ನು ತಳ್ಳಿಹಾಕಿದ ಸಿದ್ದರಾಮಯ್ಯ, ಹೊಸ ಯೋಜನೆಗಳನ್ನು ಜಾರಿಗೆ ತರಲು ಬಜೆಟ್‌ನಲ್ಲಿ ಅನುದಾನ ಇರಬೇಕು ಅಥವಾ ಪೂರಕ ಅಂದಾಜು ಪಟ್ಟಿಯಲ್ಲಿ ಹಣ ಒದಗಿಸಬೇಕು. ಈ ವರ್ಷ ಹೊಸ ಕಾರ್ಯಕ್ರಮ ಆರಂಭಿಸಲು ಅನುದಾನದ ಸಮಸ್ಯೆಯಿರಬಹುದು. ಮುಂದಿನ ವರ್ಷ ಮಾಡಬಹುದು. ಆದರೆ ಖಜಾನೆ ಖಾಲಿಯಾಗಿದೆ ಎಂದರ್ಥವಲ್ಲ ಎಂದು ಸ್ಪಷ್ಟಪಡಿಸಿದರು.

2028ರಲ್ಲಿ ಎನ್‌ಡಿಎ ಅಧಿಕಾರಕ್ಕೆ ಬಂದರೆ ಗ್ರಾಮೀಣ ಹೆಣ್ಣುಮಕ್ಕಳಿಗೆ 2 ಹಸು ಉಚಿತ: ಎಚ್.ಡಿ.ಕುಮಾರಸ್ವಾಮಿ ಭರವಸೆ

ಬೆಂಗಳೂರು, ನ.27: ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಅವರು ಮುಂದಿನ ಕರ್ನಾಟಕ ವಿಧಾನಸಭಾ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಹತ್ವದ ಹೇಳಿಕೆ ನೀಡಿದ್ದಾರೆ. 2028ರಲ್ಲಿ ರಾಜ್ಯದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಯ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದರೆ ಗ್ರಾಮೀಣ ಭಾಗದ ಪ್ರತಿಯೊಬ್ಬ ಹೆಣ್ಣುಮಗಳಿಗೆ ಎರಡು ಹಸುಗಳನ್ನು ಉಚಿತವಾಗಿ ನೀಡಲಾಗುವುದು ಎಂದು ಅವರು ಘೋಷಿಸಿದ್ದಾರೆ.

ಬೆಂಗಳೂರಿನ ಜೆಡಿಎಸ್ ಪ್ರಧಾನ ಕಚೇರಿ ಜೆ.ಪಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಮೀಣ ಬದುಕಿನಲ್ಲಿ ಹೈನುಗಾರಿಕೆ ಶಾಶ್ವತ ಮತ್ತು ಸುಸ್ಥಿರ ಆದಾಯ ನೀಡುವ ಮಾರ್ಗವಾಗಿದ್ದು, ಮಹಿಳೆಯರು ಸ್ವಾವಲಂಬಿಗಳಾಗಲು ಇದು ನೆರವಾಗಲಿದೆ ಎಂದು ಪ್ರತಿಪಾದಿಸಿದ್ದಾರೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಗೃಹಲಕ್ಷ್ಮಿ (ಮಹಿಳೆಯರಿಗೆ 2,000 ರೂ.) ಯೋಜನೆಯು ಮಹಿಳಾ ಮತದಾರರಲ್ಲಿ ದೊಡ್ಡ ಮಟ್ಟದ ಪ್ರಭಾವ ಬೀರಿದೆ. ಇದಕ್ಕೆ ಪ್ರತಿಯಾಗಿ ಕೇವಲ ಮಾಸಿಕ ನಗದು ನೀಡುವ ಬದಲಿಗೆ, ನಿರಂತರ ಆರ್ಥಿಕ ಆದಾಯ ತಂದುಕೊಡುವ ಆಸ್ತಿ ಸೃಜನೆ ಅಥವಾ ಹೈನುಗಾರಿಕೆ ಮಾದರಿಯನ್ನು ಪ್ರತಿಪಾದಿಸುವುದು ಜೆಡಿಎಸ್–ಎನ್‌ಡಿಎ ತಂತ್ರಗಾರಿಕೆ



ಯಾಗಿದೆ. ಹಳೇ ಮೈಸೂರು ಭಾಗ ಸೇರಿದಂತೆ ಗ್ರಾಮೀಣ ಕರ್ನಾಟಕದಲ್ಲಿ ಜೆಡಿಎಸ್ ತನ್ನ ಸಾಂಪ್ರದಾಯಿಕ ರೈತ ಬೆಂಬಲ ನೆಲೆಯನ್ನು ಹೊಂದಿದೆ. ಕಾಂಗ್ರೆಸ್‌ನ ಅನ್ನಭಾಗ್ಯ, ಗೃಹಲಕ್ಷ್ಮಿಯಂತಹ ಗ್ಯಾರಂಟಿಗಳಿಂದಾಗಿ ಗ್ರಾಮೀಣ ಭಾಗದಲ್ಲ

24ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

ನವಂಬರ್ 28, 2026 ಶನಿವಾರ

ಒಳಪುಟಗಳಲ್ಲಿ

ಸುಪ್ರೀಂ ಆದೇಶ ಉಲ್ಲಂಘನೆ: ತಮಿಳುನಾಡು ಸರ್ಕಾರಕ್ಕೆ ಸಂಕಷ್ಟ - ಪು.4

ವಿದ್ಯುತ್ ಸರಬರಾಜು ಕಂಪನಿಗಳಿಂದ ಗ್ರಾಹಕರಿಗೆ ಸಿಹಿಸುದ್ದಿ: ಲಾಭದ ಒಂದು ಭಾಗ ಮರಳಿಸಲು ನಿರ್ಧಾರ - ಪು.5

ಕನಕದಾಸರ ತತ್ವ, ಭಕ್ತಿಯೇ ಸಮಾಜಕ್ಕೆ ದೊಡ್ಡ ಸಂದೇಶ: ಡಿ.ಕೆ. ಶಿವಕುಮಾರ್

ಸಂತರ ಹೆಜ್ಜೆ ಗುರುತುಗಳನ್ನು ಪಾಲಿಸುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ



ಬೆಂಗಳೂರಿನ ಶಾಸಕರ ಭವನದ ಬಳಿಯಿರುವ ಕನಕದಾಸರ ಪ್ರತಿಮೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪುಷ್ಪನಮನ ಸಲ್ಲಿಸಿದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ ಇದ್ದರು.

ಬೆಂಗಳೂರು, ನ.27: ಜಾತಿ, ಕುಲದ ಹೆಸರಿನಲ್ಲಿ ಭೇದಭಾವ ಮಾಡುವುದನ್ನು ಬಿಟ್ಟು ಮಾನವೀಯತೆ ಮತ್ತು ಸಮಾನತೆಯ ತತ್ವಗಳನ್ನು ಪಾಲಿಸಬೇಕು ಎಂಬ ಕನಕದಾಸರ ಸಂದೇಶ ಇಂದಿಗೂ ಪ್ರಸ್ತುತವಾಗಿದೆ. ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯುವುದೇ ಆ ಮಹಾನ್ ದಾಸರಿಗೆ ಸಲ್ಲಿಸುವ ನಿಜವಾದ ಗೌರವ ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರಿನ ಶಾಸಕರ ಭವನದ ಬಳಿ ಮಾಧ್ಯಮಗಳ ಜತೆ ಶುಕ್ರವಾರ ಮಾತನಾಡಿ, ಕುಲ ಕುಲ ಕುಲವೆಂದು ಹೊಡೆದಾಡಬೇಡಿ, ಇದೆಲ್ಲವನ್ನೂ ಬಿಟ್ಟು ಮಾನವೀಯತೆಯ ಹಾದಿಯಲ್ಲಿ ಸಾಗಬೇಕು ಎಂದು ಕನಕದಾಸರು ನಮಗೆಲ್ಲ ಕಿವಿಮಾತು ಹೇಳಿದ್ದಾರೆ. ಅವರ ಈ ಸಂದೇಶವನ್ನು ನಾವೆಲ್ಲರೂ ಪಾಲಿಸಿದರೆ ಅದಕ್ಕಿಂತ ದೊಡ್ಡ ಸಾಧನೆ ಮತ್ತೊಂದಿಲ್ಲ. ಭಕ್ತಿಗೆ ಕೃಷ್ಣನೇ ತಿರುಗಿದ ಪ್ರಸಂಗಕ್ಕಿಂತ ಮತ್ತೊಂದು ದೊಡ್ಡ ನಿದರ್ಶನ ಬೇಕಿಲ್ಲ ಎಂದರು.

ಭಕ್ತಿಯ ಪರಂಪರೆಯಲ್ಲಿ ಕನಕದಾಸರು ಅತ್ಯಂತ ಶ್ರೇಷ್ಠ ಸ್ಥಾನ ಹೊಂದಿದ್ದಾರೆ. ಅವರು ಬಿಟ್ಟುಹೋದ ಆದರ್ಶಗಳು, ತತ್ವಗಳು ಮತ್ತು ಹೆಜ್ಜೆಗುರುತುಗಳು ಸದಾ ನಮ್ಮೊಂದಿಗೆ ಇರಲಿವೆ. ಅವುಗಳನ್ನು ಪಾಲಿಸಿಕೊಂಡು ನಡೆಯುವುದೇ ಮುಖ್ಯ. ಅವರ ಸಂದೇಶವನ್ನು ಕೇವಲ ಆಚರಣೆಗಳಿಗೆ ಸೀಮಿತಗೊಳಿಸದೆ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು" ಎಂದು ತಿಳಿಸಿದರು.

ಕನಕದಾಸರು ಕೀರ್ತನೆ ಮೂಲಕ ಜಾತಿಯ ವಿಷಬೀಜ ಕಿತ್ತುಹಾಕಲು ಶ್ರಮಿಸಿದ ಮಹಾನ್ ಕ್ರಾಂತಿಕಾರಿ. ಕುಲದ ಹೆಸರಿನಲ್ಲಿ ತಾರತಮ್ಯ ಬೇಡ ಎಂದು ಸಂದೇಶ ನೀಡಿದರು. ಬಸವಣ್ಣ ಕೇವಲ ಲಿಂಗಾಯತರಿಗೆ, ಕನಕದಾಸರು ಕೇವಲ ಕುರುಬರಿಗೆ, ಅಂಬೇಡ್ಕರ್ ಅವರು ಪರಿಶಿಷ್ಟ ಸಮುದಾಯದವರಿಗೆ ಮಾತ್ರ ಸೀಮಿತವಲ್ಲ. ಧರ್ಮ ಯಾವುದಾದರೂ ತತ್ವ ಒಂದೇ, ನಾಮ ನೂರಾದರೂ ದೈವ ಒಂದೇ, ಕರ್ಮ ಹಲವಾದರೂ ನಿಷ್ಠೆ ಒಂದೇ, ಪೂಜೆ ಯಾವುದಾದರೂ ಭಕ್ತಿ ಒಂದೆ, ದೇವನೊಬ್ಬ ನಾಮ ಹಲವು. ಆತ್ಮಕ್ಕೆ ಕುಲವಿಲ್ಲ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಹಾವೇರಿ ವೈದ್ಯ ಕಾಲೇಜಿಗೆ ಸಂತ ಕನಕದಾಸರ ಹೆಸರು ನಾಮಕರಣ: ಮುಖ್ಯಮಂತ್ರಿ ಘೋಷಣೆ

ಕಾಗಿನೆಲೆ ಶ್ರೀಗಳ ಬೇಡಿಕೆಯಂತೆ ವಿದ್ಯಾರ್ಥಿ ನಿಲಯಕ್ಕೆ 5 ಕೋಟಿ ರೂ. ಅನುದಾನ



ಬ್ಯಾಡಗಿ (ಹಾವೇರಿ), ನ.27: ಹಾವೇರಿಯ ಮೆಡಿಕಲ್ ಕಾಲೇಜನ್ನು ಸಂತ ಕನಕದಾಸರ ಮೆಡಿಕಲ್ ಕಾಲೇಜು ಎಂದು ಮರುನಾಮಕರಣ ಮಾಡಲಾಗುವುದು. ಆ ಮೂಲಕ ಕನಕದಾಸರ ಹೆಸರನ್ನು ಶಾಶ್ವತವಾಗಿ ಉಳಿಸಲಾಗುವುದು. ಕಾಗಿನೆಲೆ ಶ್ರೀಗಳ ಬೇಡಿಕೆಯಂತೆ ವಿದ್ಯಾರ್ಥಿ ನಿಲಯಕ್ಕೆ 5 ಕೋಟಿ ರೂ. ಅನುದಾನ ನೀಡಲಾಗುವುದು. ಭೂಮಿಯ ಕುರಿತು ನೀಡಲಾಗಿರುವ ಬೇಡಿಕೆಯನ್ನು ಸಚಿವ ಸಂಪುಟದಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು ಎಂದು ಸಿಎಂ ಡಿ.ಕೆ. ಶಿವಕುಮಾರ್ ಘೋಷಿಸಿದರು.

ಸುಕ್ಷೇತ್ರ ಕಾಗಿನೆಲೆಯಲ್ಲಿ ನಡೆದ ಭಕ್ತಶ್ರೇಷ್ಠ ಕನಕದಾಸರ ಜಯಂತ್ಯುತ್ಸವವನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿ, ಕನಕ ಎಂದರೆ ಚಿನ್ನ. ಕನಕದಾಸರದ್ದು ಚಿನ್ನದಂತ ಗುಣ. ಭಕ್ತಿಯಿಂದ ದೇವರನ್ನು ಗೆದ್ದವರು ಕನಕದಾಸರು. ಇದಕ್ಕೆ ಉಡುಪಿಯೇ ಸಾಕ್ಷಿ. ಶ್ರೀಕೃಷ್ಣ ಪರಮಾತ್ಮನ ಮೂರ್ತಿ ಕನಕದಾಸರ ಭಕ್ತಿಗೆ ಮೆಚ್ಚಿ ದರ್ಶನ ನೀಡಿದ್ದೇ ಸಾಕ್ಷಿಗುಡ್ಡೆಯಾಗಿ ನಿಂತಿದೆ. ತಮ್ಮನ್ನು ದೇವಾಲಯದ ಒಳಗೆ ಬಿಡದೇ ಹೋದಾಗ ಕನಕದಾಸರು ಜಗಳ ಮಾಡಲಿಲ್ಲ. ತಮ್ಮ ಭಕ್ತಿಯ ಶಕ್ತಿಯಿಂದ ಶ್ರೀಕೃಷ್ಣನನ್ನು ತಮ್ಮತ್ತ ತಿರುಗಿಸಿಕೊಂಡರು. ಕೀರ್ತನೆ ಮೂಲಕವೇ ಶಾಂತಿ, ನೆಮ್ಮದಿ ತೋರಿಸಿಕೊಟ್ಟವರು. ಅರಸ, ರಾಜಕಾರಣಿಗೆ ಧರ್ಮ ಹಾಗೂ ಮಾತಿನಲ್ಲಿ ಮರ್ಮ ಇರಬೇಕು ಎಂದು ತೋರಿಸಿಕೊಟ್ಟರು ಎಂದು ತಿಳಿಸಿದರು.

ಕನಕದಾಸರು ಹಾಕಿಕೊಟ್ಟಿರುವ ಸಮಾನತೆಯ ಹಾದಿಯಲ್ಲಿ ಕಾಗಿನೆಲೆ ಪೀಠದ ಶ್ರೀಗಳು ಸಮಾಜವನ್ನು ಮುನ್ನಡೆಸುತ್ತಿದ್ದು, ಅವರಿಗೆ ಅಭಿನಂದನೆ ಸಲ್ಲಿಸುವೆ. ಕಾಗಿನೆಲೆ ಕನಕದಾಸರ ಪುಣ್ಯಸ್ಥಳ. ಇಂತಹ ಭೂಮಿಯಲ್ಲಿ ನಾವೆಲ್ಲರೂ ಸೇರಿರುವುದು ನಮ್ಮ ಪುಣ್ಯ ಎಂದರು.

ಈ ಪುಣ್ಯಕ್ಷೇತ್ರದಲ್ಲಿ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿ 35 ಕೋಟಿ ರೂ. ವೆಚ್ಚದ ಯೋಜನೆ ರೂಪಿಸಿದ್ದು, ಅನೇಕ ನಿಗಮಗಳ ಮೂಲಕ ಅನುದಾನ ನೀಡಿದ್ದೇವೆ. ನನ್ನ ಹೆಜ್ಜೆ ಗುರುತು ರಾಜ್ಯಕ್ಕೆ ದೊಡ್ಡ ಸಂದೇಶ ನೀಡಲು ಸಾಕ್ಷಿಯಾಗಬೇಕು. ಇಂದು ಕನಕದಾಸರ ಪುತ್ತಳಿ ಅನಾವರಣ ಮಾಡಿದ್ದೇನೆ ಎಂದು ತಿಳಿಸಿದರು.

ಅನ್ನಭಾಗ್ಯ ಯೋಜನೆಗೆ ಕನಕದಾಸರ ಸಂದೇಶ ಪ್ರೇರಣೆ

ಎಲ್ಲರೂ ಮಾಡುವುದು ಹೊಟ್ಟೆ, ಗೇಣು ಬಟ್ಟೆಗಾಗಿ ಎಂಬುದನ್ನು ಅರಿಯಬೇಕು. ಕನಕದಾಸರು ಹಾಕಿಕೊಟ್ಟ ಸಮಾನತೆ ಹಾದಿಯನ್ನು ನಾವು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಕನಕದಾಸರು ಕನ್ನಡ ನಾಡಿನ ಹೆಮ್ಮೆ. ಕನ್ನಡ ಸಾಹಿತ್ಯದ ಅಮೂಲ್ಯ ರತ್ನ. ಹಸಿದು ಬಂದವರಿಗೆ ಅನ್ನ ನೀಡಿ ಎಂದು ಬುದ್ಧಿಮಾತು ಹೇಳಿದವರು. ಅವರ ಮಾತಿನಂತೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದ ಮೊದಲ ದಿನವೇ ಬಸವ ಜಯಂತಿಯಂದು ಅನ್ನಭಾಗ್ಯ ಯೋಜನೆಗೆ ಅನುಮೋದನೆ ನೀಡಿದರು. ಆಮೂಲಕ ರಾಜ್ಯದಲ್ಲಿ ಯಾರೂ ಹಸಿವಿನಿಂದ ಇರಬಾರದು ಎಂದು ತೀರ್ಮಾನ ಮಾಡಿದರು. ನಮ್ಮ ಸರ್ಕಾರ ಈಗಲೂ ಅದನ್ನು ಮುಂದುವರಿಸಿಕೊಂಡು ಬಂದಿದೆ. ರಾಜ್ಯದ 4.21 ಕೋಟಿ ಜನರಿಗೆ ಅನ್ನಭಾಗ್ಯ ಯೋಜನೆ ನೀಡುತ್ತಿದ್ದು, ಇದಕ್ಕಾಗಿ ವಾರ್ಷಿಕ 8,500 ಕೋಟಿ ರೂ. ಅನುದಾನ ನೀಡುತ್ತಿದ್ದೇವೆ ಎಂದು ಡಿ.ಕೆ. ಶಿವಕುಮಾರ್ ವಿವರಿಸಿದರು.

ಕನಕದಾಸರ ಕರ್ಮಭೂಮಿ ಕಾಗಿನೆಲೆಯನ್ನು ಜಾಗತಿಕ ಮಟ್ಟದ ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿಪಡಿಸುವುದು ನಮ್ಮೆಲ್ಲರ ಜವಾಬ್ದಾರಿ. ಈ ನಿಟ್ಟಿನಲ್ಲಿ ಶ್ರೀಗಳು ಹಾಗೂ ಸಮಿತಿ ಜತೆ ಚರ್ಚಿಸಿ ತೀರ್ಮಾನ ಮಾಡಲಾಗುವುದು.

ಕನಕದಾಸರಿಗೆ ಜಾತಿಯ ಬಣ್ಣ ಬಳಿಯಬೇಡಿ

ಹಾವೇರಿ ಜಿಲ್ಲೆಯ ಕೊಳ್ಳಿ ಪಾಲಿಟೆಕ್ನಿಕ್ ಆವರಣ ಹೆಲಿಪ್ಯಾಡ್ ಬಳಿ ಮಾಧ್ಯಮಗಳೊಂದಿಗೆ ಮಾತನಾಡಿದ ಸಿಎಂ, ಸಂತ ಕನಕದಾಸರನ್ನು ಯಾವುದೇ ಒಂದು ಜಾತಿಗೆ ಸೀಮಿತಗೊಳಿಸದೆ, ಅವರ ತತ್ವ ಮತ್ತು ಸಂದೇಶಗಳನ್ನು ಎಲ್ಲರೂ ಗೌರವಿಸಬೇಕು. ಕನಕದಾಸರಿಗೆ ಜಾತಿಯ ಲೇಪ ಹಚ್ಚಬೇಡಿ. ಅವರು ಭಕ್ತಿಯ ಮೂಲಕ ಕೃಷ್ಣನನ್ನೇ ಒಲಿಸಿಕೊಂಡು ಎಲ್ಲ ವರ್ಗದವರಿಗೂ ಮಾರ್ಗದರ್ಶನ ನೀಡಿದ ಮಹನೀಯರು. ಜಾತಿ ಎನ್ನುವುದನ್ನು ಮೊದಲು ಬಿಡಿ ಎಂದು ಕನಕದಾಸರು ಹೇಳಿದ್ದಾರೆ. ಭಕ್ತಿಯಿಂದ ಕೃಷ್ಣನನ್ನೇ ಒಲಿಸಿಕೊಂಡ ಅವರು ಎಲ್ಲ ವರ್ಗದವರಿಗೂ ಮಾರ್ಗದರ್ಶನ ನೀಡಿದ್ದಾರೆ. ಅಂಥವರನ್ನು ಜಾತಿಯ ಚೌಕಟ್ಟಿನಲ್ಲಿ ನೋಡುವುದು ಸರಿಯಲ್ಲ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಕನಕದಾಸರು ಮನುಕುಲದ ಆಸ್ತಿ. ನಾವು ಕೇವಲ ಅವರ ಭಾವಚಿತ್ರಕ್ಕೆ ಪೂಜೆ ಮಾಡುವುದಷ್ಟೇ ಅಲ್ಲ. ಅವರ ಸಮಾನತೆಯ ತತ್ವವನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾಗಿನೆಲೆ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್ ರೂಪಿಸಲು ಚಿಂತನೆ ನಡೆಸಲಾಗಿದೆ. ಶ್ರೀಗಳು ಅಧಿಕಾರಿಗಳ ವಿಚಾರ ಪ್ರಸ್ತಾಪಿಸಿದ್ದಾರೆ. ಅವರಿಗೆ ಯಾವ ರೀತಿ ನ್ಯಾಯ ಒದಗಿಸಲು ಸಾಧ್ಯ ಎಂಬುದನ್ನು ಚಿಂತನೆ ನಡೆಸಲಾಗುವುದು ಎಂದರು.

ತಮಿಳುನಾಡು ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ತರಾಟೆ



ನವದೆಹಲಿ, ನ.27: ಮೇಕೆದಾಟು ಅಣೆಕಟ್ಟು ಯೋಜನೆಗೆ ಸಂಬಂಧ ರಾಜ್ಯ ಸರ್ಕಾರ ಸಲ್ಲಿಸಿದ್ದ ಡಿಪಿಆರ್ ಗೆ ಅನುಮತಿ ನೀಡದಂತೆ ಕೇಂದ್ರ ಜಲ ಆಯೋಗಕ್ಕೆ ನಿರ್ದೇಶನ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ತಮಿಳುನಾಡು ಸರ್ಕಾರಕ್ಕೆ ಸುಪ್ರೀಂಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ನ್ಯಾಯಮೂರ್ತಿ ವಿಕ್ರಮ್ ನಾಥ್ ನೇತೃತ್ವದ ದ್ವಿ ಸದಸ್ಯ ಪೀಠ ಪ್ರಕರಣದ ವಿಚಾರಣೆ ನಡೆಸುವ ವೇಳೆ ಹಿರಿಯ ವಕೀಲರು ಲಭ್ಯವಿಲ್ಲ ಎಂಬ ಕಾರಣ ನೀಡಿ ವಿಚಾರಣೆ ಮುಂದೂಡುವಂತೆ ತಮಿಳುನಾಡು ಮನವಿ ಮಾಡಿತು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಪೀಠ ತಮಿಳುನಾಡು ಸರ್ಕಾರದ ವಕೀಲರನ್ನು ತರಾಟೆಗೆ ತೆಗೆದುಕೊಂಡಿತು. ಹಿಂದಿನ ವಿಚಾರಣೆಯಲ್ಲೂ ಇದೇ ಕಾರಣ ನೀಡಿ ಮುಂದೂಡಿಕೆ ಕೋರಲಾಗಿತ್ತು. ಈಗಲೂ ಅದೇ ನೆಪವನ್ನು ಹೇಳುತ್ತಿದ್ದೀರಿ ಪದೇಪದೆ ಇಂತಹ ಮನವಿಗಳನ್ನು ಸಲ್ಲಿಸುವುದರಿಂದ ನ್ಯಾಯಾಲಯದಲ್ಲಿ ಪ್ರಕರಣಗಳ ಬಾಕಿ ಸಂಖ್ಯೆ ಹೆಚ್ಚಾಗುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿತು.

ಅಮಿತ್ ಶಾಗೆ ಮರೆವು ಕಾಯಿಲೆ ಇರಬಹುದು: ಪಿ. ಚಿದಂಬರಂ



■ ಮಹಿಳಾ ಮೀಸಲಾತಿ ಕುರಿತು ಕಾಂಗ್ರೆಸ್‌ನ ನಿಲುವನ್ನು ತಪ್ಪಾಗಿ ಬಿಂಬಿಸುತ್ತಿದ್ದಾರೆ ಎಂದು ವಾಗ್ದಾಳಿ

ನವದೆಹಲಿ, ನ. 27: ಮಹಿಳಾ ಮೀಸಲಾತಿಯ ಕುರಿತು ಕಾಂಗ್ರೆಸ್‌ನ ನಿಲುವನ್ನು ತಪ್ಪಾಗಿ ಬಿಂಬಿಸುತ್ತಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ನಾಯಕ ಪಿ. ಚಿದಂಬರಂ ಅವರು ಶುಕ್ರವಾರ(ನ. 27) ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಅವರಿಗೆ ಮರೆವು ಕಾಯಿಲೆ ಇರಬಹುದು ಎಂದು ಟೀಕಿಸಿದ್ದಾರೆ.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಹಾಕಿರುವ ಪಿ.ಚಿದಂಬರಂ, ಮಹಿಳಾ ಮೀಸಲಾತಿ ಕಾನೂನನ್ನು ಅಂಗೀಕರಿಸಲು ಕಾಂಗ್ರೆಸ್ ಬೆಂಬಲ ನೀಡಿತ್ತು ಮತ್ತು ಈಗಲೂ ತಕ್ಷಣವೇ ಜಾರಿಗೆ ತರುವಂತೆ ಒತ್ತಾಯಿಸುತ್ತಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಅಮಿತ್ ಶಾ ಅವರು ಬಹುಶಃ ಸತ್ಯವನ್ನು ಮರೆಮಾಚುತ್ತಿರಬೇಕು. ಲೋಕಸಭೆ ಮತ್ತು ರಾಜ್ಯ ಶಾಸಕಾಂಗಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು (1/3) ಸ್ಥಾನ ಮೀಸಲಿಡುವ ಭರವಸೆಯ ಅನುಷ್ಠಾನವನ್ನು ಕಾಂಗ್ರೆಸ್ ತಡೆಯಲು ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಸಂವಿಧಾನದ (106ನೇ) ತಿದ್ದುಪಡಿ ಕಾಯಿದೆ, 2023 ಈಗಾಗಲೇ ಜಾರಿಯಾಗಿದೆ. ಈ ಮಸೂದೆಯು 2023ರ ಸೆ.20 ಮತ್ತು 21ರಂದು ಸಂಸತ್ತಿನ ಉಭಯ ಸದನಗಳಲ್ಲಿ ಅಂಗೀಕಾರಗೊಂಡಿತ್ತು. ಈ ಮಸೂದೆಗೆ ಕಾಂಗ್ರೆಸ್ ಸಂಪೂರ್ಣ ಬೆಂಬಲ ನೀಡಿತ್ತು ಮತ್ತು ಈ ಕಾಯಿದೆಯನ್ನು ತಕ್ಷಣವೇ ಜಾರಿಗೆ ತರುವಂತೆ ಆಗ್ರಹಿಸುತ್ತಲೇ ಇದೆ. ಹೀಗಿದ್ದರೂ, ಬಿಜೆಪಿ ಸರ್ಕಾರವು ಈ ಕಾಯಿದೆಯನ್ನು ಯಾಕೆ ಜಾರಿಗೆ ತರುತ್ತಿಲ್ಲ ಎಂದು ಪ್ರಶ್ನಿಸಿದ್ದಾರೆ.

ಮತ್ತೊಂದು ಪೋಸ್ಟ್‌ನಲ್ಲಿ ಈ ಕಾಯಿದೆಯು 'ಅನುಚ್ಛೇದ 334ಎ'ಅನ್ನು ಸೇರಿಸಿದ್ದು, ಮಹಿಳಾ ಮೀಸಲಾತಿಯ ಜಾರಿಯನ್ನು ಮುಂದಿನ ಜನಗಣತಿಯ ನಂತರ ನಡೆಯಲಿರುವ ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಯೊಂದಿಗೆ ಜೋಡಿಸಿದೆ. ಸಂಸತ್ತಿನಲ್ಲಿ ನಡೆದ ಚರ್ಚೆ ವೇಳೆ ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ಈ ನಿಬಂಧನೆಯನ್ನು ವಿರೋಧಿಸಿದ್ದವು ಎಂದು ಹೇಳಿದ್ದಾರೆ.

ಇದು ಜನಗಣತಿ ಮತ್ತು ಕ್ಷೇತ್ರ ಮರುವಿಂಗಡಣೆ ಎಂಬ ಎರಡು ಅನಗತ್ಯ ಅಡೆತಡೆಗಳನ್ನು ಸೃಷ್ಟಿಸುತ್ತದೆ ಎಂದಿರುವ ಅವರು, ಬಿಜೆಪಿಯು ಈ ನಿಬಂಧನೆಯನ್ನು ಸೇರಿಸಲು ಪಟ್ಟು ಹಿಡಿದಿತ್ತು. ಅನುಚ್ಛೇದ 334ಎ ಅನ್ನು ರದ್ದುಗೊಳಿಸುವ ಮೂಲಕ ಸರ್ಕಾರವು ಮಹಿಳಾ ಮೀಸಲಾತಿಯನ್ನು ತಕ್ಷಣವೇ ಜಾರಿಗೆ ತರಲು ಸಾಧ್ಯವಿದೆ. 334ಂ ವಿಧಿಯನ್ನು ರದ್ದುಗೊಳಿಸಿದರೆ, ಮಹಿಳಾ ಮೀಸಲಾತಿ ತಕ್ಷಣವೇ ಜಾರಿಗೆ ತರಬಹುದು ಎಂದಿದ್ದಾರೆ.

ನವದೆಹಲಿಯಲ್ಲಿ ಗುರುವಾರ(ನ.26) ನಡೆದ ಸಂವಿಧಾನ ಗೌರವ ದಿವಸ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಅಮಿತ್ ಶಾ, ಮಹಿಳಾ ಮೀಸಲಾತಿ ಮಸೂದೆಯ ಅನುಷ್ಠಾನಕ್ಕೆ ಕಾಂಗ್ರೆಸ್ ಅಡ್ಡಿಪಡಿಸುತ್ತಿದೆ, ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡಾ 33ರಷ್ಟು ಮೀಸಲಾತಿ ಕಲ್ಪಿಸಲು ಬಿಜೆಪಿ ಬದ್ಧವಾಗಿದೆ. ರಾಹುಲ್ ಗಾಂಧಿಯವರಿಂದ ಈ ಮಸೂದೆ ಅನುಷ್ಠಾನವನ್ನು ತಡೆಯಲು ಸಾಧ್ಯವಿಲ್ಲ ಎಂದಿದ್ದರು.

ಲೋಕಸಭೆಯ ಸ್ಥಾನಗಳ ಸಂಖ್ಯೆ ಶೇ.50 ಹೆಚ್ಚಳಕ್ಕೆ ಕೇಂದ್ರ ಸಂಪುಟ ಅಸ್ತು

ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ಹೊಸ ಪ್ರಯತ್ನ

2051ರವರೆಗೆ ರಾಜ್ಯಗಳ ನಡುವಿನ ಸ್ಥಾನಗಳ ಅನುಪಾತದ ಹಂಚಿಕೆ ಸ್ಥಗಿತಗೊಳಿಸಲು ಪ್ರಸ್ತಾಪ

ನವದೆಹಲಿ, ನ.27: ಲೋಕಸಭಾ ಕ್ಷೇತ್ರಗಳ ಪುನರ್ವಿಂಗಡಣೆ (ಡಿಲಿಮಿಟೇಷನ್) ಪ್ರಕ್ರಿಯೆಗೆ ಸಂಬಂಧಿಸಿದ ಮಹತ್ವದ ತಿದ್ದುಪಡಿಗಳಿಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟ ಶುಕ್ರವಾರ ಅನುಮೋದನೆ ನೀಡಿದೆ. ಇದರ ಅನ್ವಯ ದೇಶದ ಎಲ್ಲ ರಾಜ್ಯಗಳ ಲೋಕಸಭಾ ಸ್ಥಾನಗಳ ಸಂಖ್ಯೆಯನ್ನು ಶೇ.50ರಷ್ಟು ಹೆಚ್ಚಿಸಲು ನಿರ್ಧರಿಸಲಾಗಿದೆ. ಅಲ್ಲದೆ, ರಾಜ್ಯಗಳ ನಡುವಿನ ಸ್ಥಾನಗಳ ಅನುಪಾತದ ಹಂಚಿಕೆಯನ್ನು 2051ರವರೆಗೆ ಸ್ಥಗಿತಗೊಳಿಸಲು ಪ್ರಸ್ತಾಪಿಸಲಾಗಿದೆ.

ಈ ನಿರ್ಧಾರವು ಜನಸಂಖ್ಯೆ ಆಧಾರಿತ ಕ್ಷೇತ್ರ ಪುನರ್ವಿಂಗಡಣೆಯಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಆಗಬಹುದಾದ ರಾಜಕೀಯ ಪ್ರಾತಿನಿಧ್ಯದ ನಷ್ಟದ ಆತಂಕವನ್ನು ನಿವಾರಿಸುವ ಉದ್ದೇಶ ಹೊಂದಿದೆ. ಕರ್ನಾಟಕ ಸೇರಿದಂತೆ ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳು ಜನಸಂಖ್ಯೆ ನಿಯಂತ್ರಣದಲ್ಲಿ ಸಾಧಿಸಿರುವ ಪ್ರಗತಿಯಿಂದಾಗಿ ಲೋಕಸಭೆಯಲ್ಲಿ ತಮ್ಮ ಪ್ರಾತಿನಿಧ್ಯ ಕಡಿಮೆಯಾಗಬಹುದು ಎಂಬ ಆತಂಕ ವ್ಯಕ್ತಪಡಿಸಿದ್ದವು.

ಎಲ್ಲ ರಾಜ್ಯಗಳಿಗೂ ಸಮಾನವಾಗಿ ಶೇ.50ರಷ್ಟು ಸ್ಥಾನಗಳನ್ನು ಹೆಚ್ಚಿಸುವ ಮೂಲಕ ಪ್ರಸ್ತುತ ರಾಜ್ಯಗಳ ನಡುವಿನ ಪ್ರಾತಿನಿಧ್ಯದ ಅನುಪಾತವನ್ನು ಉಳಿಸಿಕೊಳ್ಳಲು ಕೇಂದ್ರ ಸರ್ಕಾರ ಮುಂದಾಗಿದೆ. ಈ ಮೂಲಕ ಕ್ಷೇತ್ರ ಪುನರ್ವಿಂಗಡಣೆಯನ್ನು ಜನಗಣತಿಯ ಆಧಾರದಲ್ಲಿ ರಾಜ್ಯಗಳ ಸ್ಥಾನ ಹಂಚಿಕೆ ಬದಲಿಸುವ ಪ್ರಕ್ರಿಯೆಯಿಂದ ಪ್ರತ್ಯೇಕಿಸುವ ಉದ್ದೇಶ ಹೊಂದಿದೆ.

ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆಯ ಅನುಷ್ಠಾನಕ್ಕೂ ಈ ತಿದ್ದುಪಡಿಗಳು ಸಂಬಂಧಿಸಿವೆ. ಲೋಕಸಭೆಯ ವಿಶೇಷ ಅಧಿವೇಶನ ನವೆಂಬರ್ 30ರಿಂದ ಆರಂಭವಾಗಲಿದ್ದು, ಡಿಸೆಂಬರ್ 3ರವರೆಗೆ ನಡೆಯುವ ನಿರೀಕ್ಷೆಯಿದೆ. ಈ ಅಧಿವೇಶನದಲ್ಲಿ ತಿದ್ದುಪಡಿ

ಕ್ಷೇತ್ರ ಮರುವಿಂಗಡಣೆ ಮಸೂದೆಗೆ ಸಂಸತ್ ಅಸ್ತು: ಎನ್‌ಡಿಎ ವಿಶ್ವಾಸ

ನವದೆಹಲಿ, ನ. 27: ಕ್ಷೇತ್ರ ಪುನರ್ವಿಂಗಡಣೆ ಮತ್ತು ಶೇ 33ರಷ್ಟು ಮಹಿಳಾ ಮೀಸಲಾತಿ ಜಾರಿಗೆ ಸಂಬಂಧಿಸಿದ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಸಂಸತ್ತಿನಲ್ಲಿ ಅಂಗೀಕರಿಸಿಕೊಳ್ಳಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಭಾರಿ ವಿಶ್ವಾಸ ವ್ಯಕ್ತಪಡಿಸಿದೆ. ಮಸೂದೆ ಅಂಗೀಕಾರಕ್ಕೆ ಅಗತ್ಯವಿರುವ ಮೂರನೇ ಎರಡರಷ್ಟು ಬಹುಮತವನ್ನು ಈ ಬಾರಿ ಖಚಿತವಾಗಿ ಪಡೆಯುವುದಾಗಿ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟ ಹೇಳಿಕೊಂಡಿದೆ. ಇದರ ಹಿಂದೆ ತಮಿಳುನಾಡಿನ ಡಿಎಂಕೆ, ಎನ್‌ಸಿಪಿ (ಶರದ್‌ಪವಾರ್), ತೃಣಮೂಲ ಕಾಂಗ್ರೆಸ್ (ಟಿಎಂಸಿ) ಹಾಗೂ ಏಕನಾಥ ಶಿಂದೆ ನೇತೃತ್ವದ ಶಿವಸೇನೆಯ ಬಣಗಳ ಬೆಂಬಲ ದೊರೆಯುವ ಸ್ಪಷ್ಟ ಮುನ್ಸೂಚನೆ ಇದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಪ್ರಸ್ತುತ ಲೋಕಸಭೆಯಲ್ಲಿ ಮೂರು ಸ್ಥಾನಗಳು ಖಾಲಿ ಇದ್ದು, 540 ಸದಸ್ಯ ಬಲವಿದೆ. ಸಂವಿಧಾನ ತಿದ್ದುಪಡಿ ಮಸೂದೆಗೆ ಅಂಗೀಕಾರ ಪಡೆಯಲು ಕನಿಷ್ಠ 360 ಸಂಸದರ ಬೆಂಬಲ ಅಗತ್ಯವಾಗಿದೆ. ಸದನದಲ್ಲಿ ಡಿಎಂಕೆ 22 ಹಾಗೂ ಎನ್‌ಸಿಪಿ (ಎಸ್‌ಪಿ) 8 ಸಂಸದರನ್ನು ಹೊಂದಿವೆ. ಈ ಹಿಂದೆ ವಿರೋಧ ಪಕ್ಷಗಳೊಂದಿಗೆ ಗುರುತಿಸಿಕೊಂಡಿದ್ದ ಇತರ ಪ್ರಾದೇಶಿಕ ಪಕ್ಷಗಳೊಂದಿಗೂ ಬಿಜೆಪಿ ನಾಯಕತ್ವ ಸಂಪರ್ಕದಲ್ಲಿದೆ. ಸಣ್ಣ ಪಕ್ಷಗಳ ಕನಿಷ್ಠ ಆರು ಸಂಸದರು ಈಗಾಗಲೇ ಬೆಂಬಲದ ಭರವಸೆ ನೀಡಿದ್ದು, ಮಸೂದೆಯ ಪ್ರತಿ ಕೈಸೇರಿದ ಬಳಿಕ ಇನ್ನಷ್ಟು ಸದಸ್ಯರು ಬೆಂಬಲಿಸುವ ವಿಶ್ವಾಸವಿದೆ ಎಂದು ಬಿಜೆಪಿ ನಾಯಕರೊಬ್ಬರು ಹೇಳಿದ್ದಾರೆ. ಲೋಕಸಭೆಯಲ್ಲಿ ತಮಿಳುನಾಡಿಗೆ ಪ್ರಸ್ತುತ ಇರುವ ಶೇ 7.2ರಷ್ಟು ಕ್ಷೇತ್ರಗಳ ಪಾಲನ್ನು ಉಳಿಸಿಕೊಳ್ಳುವ ಭರವಸೆ ನೀಡಿದರೆ, ಕ್ಷೇತ್ರ ಪುನರ್ವಿಂಗಡಣೆ ಮಸೂದೆಗೆ ಬೆಂಬಲಿಸಲು ಸಿದ್ಧ ಎಂದು ಡಿಎಂಕೆಯ ಇಬ್ಬರು ಹಿರಿಯ ನಾಯಕರು ಗುರುವಾರ ಸುಳಿವು ನೀಡಿದ್ದಾರೆ. ಜನಸಂಖ್ಯೆ ನಿಯಂತ್ರಣವನ್ನು ಯಶಸ್ವಿಯಾಗಿ ಜಾರಿಗೊಳಿಸಿದ ದಕ್ಷಿಣದ ರಾಜ್ಯಗಳಿಗೆ ರಾಜಕೀಯವಾಗಿ ಶಿಕ್ಷೆಯಾಗಬಾರದು ಎಂದಿರುವ ಅವರು, ಕ್ಷೇತ್ರಗಳ ಸಂಖ್ಯೆ ಹೆಚ್ಚಿಸಲು ನಮ್ಮ ಸಮ್ಮತಿ ಇದೆ; ಆದರೆ, ರಾಜ್ಯದ ಶೇಕಡಾವಾರು ಪ್ರಾತಿನಿಧ್ಯ ಸುರಕ್ಷಿತವಾಗಿರಬೇಕು ಎಂದು ಸ್ಪಷ್ಟಪಡಿಸಿದ್ದಾರೆ.

ಮತ್ತೊಂದೆಡೆ, ಎನ್‌ಸಿಪಿ ನಾಯಕಿ ಸುಪ್ರಿಯಾ ಸುಳೆ ಸಹ ಮಸೂದೆಯ ಕುರಿತು ಗುರುವಾರ ಸಕಾರಾತ್ಮಕ ಸುಳಿವು ನೀಡಿದ್ದಾರೆ. ನಾವು ಯಾವಾಗಲೂ ವಿಶಾಲ ರಾಷ್ಟ್ರೀಯ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡೇ ನಿರ್ಧಾರ ತೆಗೆದುಕೊಂಡಿದ್ದೇವೆ. ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಕಾಂಗ್ರೆಸ್ ಸೇರಿದಂತೆ ಸರ್ವಪಕ್ಷಗಳ ಸಂಸದರು ದೇಶದ ನಿಲುವನ್ನು ಮಂಡಿಸಲು ವಿದೇಶಗಳಿಗೆ ತೆರಳಿದ್ದೆವು. ಜಿಎಸ್‌ಟಿ ಮತ್ತು ಮಹಿಳಾ ಮೀಸಲಾತಿ ಮಸೂದೆಗಳಂತೆ ಸಾರ್ವಜನಿಕ ಹಿತಾಸಕ್ತಿಯ ಹಲವು ಮಸೂದೆಗಳು ಅವಿರೋಧವಾಗಿ ಅಂಗೀಕಾರಗೊಂಡಿವೆ. ಕ್ಷೇತ್ರ ಪುನರ್ವಿಂಗಡಣೆ ಮಸೂದೆಗೂ ಅದೇ ರೀತಿ ಆಗಬಹುದು. ಮೊದಲು ಮಸೂದೆ ನಮ್ಮ ಕೈಗೆ ಬರಲಿ, ಅದನ್ನು ಓದಿ ನಿರ್ಧರಿಸುತ್ತೇವೆ ಎಂದು ಅವರು ತಿಳಿಸಿದ್ದಾರೆ. ಇದೇ ವರ್ಷದ ಏಪ್ರಿಲ್ 16ರಿಂದ 18ರವರೆಗೆ ನಡೆದ ಅಧಿವೇಶನದಲ್ಲಿ ಲೋಕಸಭೆ ಮತ್ತು ವಿಧಾನಸಭೆಗಳ ಕ್ಷೇತ್ರ ವಿಸ್ತರಣೆ ಉದ್ದೇಶದ ಸಂವಿಧಾನ (131ನೇ ತಿದ್ದುಪಡಿ) ಮಸೂದೆಗೆ ಹಿನ್ನಡೆಯಾಗಿತ್ತು. ಆಗ 528 ಸದಸ್ಯರು ಮತದಾನದಲ್ಲಿ ಪಾಲ್ಗೊಂಡಿದ್ದು, 11 ಸದಸ್ಯರು ಗೈರಾಗಿದ್ದರು. ಮಸೂದೆ ಅಂಗೀಕಾರಕ್ಕೆ 352 ಮತಗಳ ಅಗತ್ಯವಿತ್ತು. ಆದರೆ, ಆಡಳಿತಾರೂಢ ಎನ್‌ಡಿಎ ಪರವಾಗಿ 298 ಮತಗಳು ಹಾಗೂ ವಿರೋಧ ಪಕ್ಷಗಳ ಇಂಡಿಯಾ ಮೈತ್ರಿಕೂಟದ ಕಡೆಯಿಂದ ವಿರುದ್ಧವಾಗಿ 230 ಮತಗಳು ಚಲಾವಣೆಯಾದ್ದರಿಂದ ಮಸೂದೆಗೆ ಸೋಲುಂಟಾಗಿತ್ತು. ಹೀಗಾಗಿ, ಈ ಬಾರಿ 360 ಮತಗಳ ಗುರಿ ತಲುಪಲು ಬಿಜೆಪಿ ಹೆಚ್ಚುವರಿ ಬೆಂಬಲ ಕ್ರೋಡೀಕರಿಸುವಲ್ಲಿ ನಿರತವಾಗಿದೆ.

ಲೋಕಸಭೆಯಲ್ಲಿ ಮಸೂದೆ ಅಂಗೀಕಾರಗೊಂಡರೆ, ಡಿಸೆಂಬರ್ 2ರಂದು ಸೇರುವ ರಾಜ್ಯಸಭೆಯ ಮುಂದೆ ಅದನ್ನು ಮಂಡಿಸುವ ನಿರೀಕ್ಷೆಯಿದೆ. 245 ಸದಸ್ಯ ಬಲದ ಮೇಲ್ಮನೆಯಲ್ಲಿ ಎನ್‌ಡಿಎ 142 ಸಂಸದರನ್ನು ಹೊಂದಿದ್ದು, ಸಂವಿಧಾನ ತಿದ್ದುಪಡಿ ಅಂಗೀಕಾರಕ್ಕೆ 161 ಸದಸ್ಯರ ಬೆಂಬಲ ಬೇಕಾಗುತ್ತದೆ. ಅಂದರೆ, ಆಡಳಿತ ಮೈತ್ರಿಕೂಟಕ್ಕೆ ಇನ್ನೂ 19 ಸಂಸದರ ಬೆಂಬಲದ ಅಗತ್ಯವಿದೆ. ರಾಜ್ಯಸಭೆಯಲ್ಲಿ ಡಿಎಂಕೆ 8 ಹಾಗೂ ಎನ್‌ಸಿಪಿ (ಎಸ್‌ಪಿ) 1 ಸಂಸದರನ್ನು ಹೊಂದಿವೆ. ಪ್ರಾದೇಶಿಕ ಪಕ್ಷಗಳೂ ಸೇರಿದಂತೆ ಎನ್‌ಡಿಎಯೇತರ ಪಕ್ಷಗಳು ಸುಮಾರು 100 ಸದಸ್ಯರನ್ನು ಹೊಂದಿದ್ದು, ಮೇಲ್ಮನೆಯಲ್ಲೂ ಅಗತ್ಯ ಸಂಖ್ಯಾಬಲ ದೊರೆಯಲಿದೆ ಎಂಬ ದೃಢ ವಿಶ್ವಾಸವನ್ನು ಬಿಜೆಪಿ ವ್ಯಕ್ತಪಡಿಸಿದೆ.



ನವದೆಹಲಿಯಲ್ಲಿ ನಡೆದ ವಿದ್ಯುತ್ ಸಚಿವರ ಸಮ್ಮೇಳನದ ಉದ್ಘಾಟನಾ ಅಧಿವೇಶನದಲ್ಲಿ, ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳು ಹಾಗೂ ವಿದ್ಯುತ್ ಸಚಿವ ಮನೋಹರ್ ಲಾಲ್ ಉಪಸ್ಥಿತಿಯಲ್ಲಿ ವಿದ್ಯುತ್ ಹಾಗೂ ನೂತನ ಮತ್ತು ನವೀಕರಿಸಬಹುದಾದ ಇಂಧನ ಖಾತೆಯ ರಾಜ್ಯ ಸಚಿವ ಶ್ರೀಪಾದ ಯಸ್ಸೋ ನಾಯಕ್ ಉದ್ಘಾಟಿಸಿದರು.

ಸುಪ್ರೀಂ ಆದೇಶ ಉಲ್ಲಂಘನೆ: ತಮಿಳುನಾಡು ಸರ್ಕಾರಕ್ಕೆ ಸಂಕಷ್ಟ

ನವದೆಹಲಿ,ನ.27: ಮಧುರೈನ ತಿರುಪ್ಪರಂಕುಂದ್ರಂ ಬೆಟ್ಟದ ಕಾರ್ತಿಕ ದೀಪಂ ವಿವಾದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಆದೇಶ ಉಲ್ಲಂಘಿಸಿದ ಆರೋಪದ ಹಿನ್ನೆಲೆಯಲ್ಲಿ ತಮಿಳುನಾಡಿನ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ನೇತೃತ್ವದ ಸರ್ಕಾರಕ್ಕೆ ಹಿನ್ನಡೆಯಾಗಿದೆ. ನ್ಯಾಯಾಲಯದ ಆದೇಶವನ್ನು ಉದ್ದೇಶಪೂರ್ವಕವಾಗಿ ಪಾಲಿಸದ ಆರೋಪದ ಮೇಲೆ ರಾಜ್ಯದ ಮುಖ್ಯ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕ ಸೇರಿದಂತೆ ಹಲವು ಹಿರಿಯ ಅಧಿಕಾರಿಗಳಿಗೆ ಸುಪ್ರೀಂ ಕೋರ್ಟ್ ನ್ಯಾಯಾಂಗ ನಿಂದನೆ ನೋಟಿಸ್ ಜಾರಿ ಮಾಡಿದೆ.

ನ.20ರಂದು ನೀಡಿದ್ದ ಆದೇಶದಂತೆ ತಿರುಪ್ಪರಂಕುಂದ್ರಂ ಬೆಟ್ಟದ ವಿವಾದಿತ ದೀಪಸ್ತಂಭದಲ್ಲಿ ಕಾರ್ತಿಕೈ ದೀಪಂ ಬೆಳಗಿಸಬೇಕಿತ್ತು. ಆದರೆ ನವೆಂಬರ್ 24ರಂದು ದೇವಸ್ಥಾನದ ಸಾಂಪ್ರದಾಯಿಕ ಸ್ಥಳವಾದ ಉಚ್ಚಿಪಿಳ್ಳೈಯಾರ್ ಮಂಟಪದಲ್ಲಿ ಮಾತ್ರ ದೀಪ ಬೆಳಗಿಸಲಾಗಿತ್ತು. ವಿವಾದಿತ ದೀಪಸ್ತಂಭದಲ್ಲಿ ದೀಪ ಬೆಳಗಿಸದಿರುವುದು ನ್ಯಾಯಾಲಯದ ಆದೇಶದ ಉಲ್ಲಂಘನೆ ಎಂದು ಅರ್ಜಿದಾರರು ನ್ಯಾಯಾಲಯದ ಗಮನ ಸೆಳೆದಿದ್ದರು.



ಈ ಹಿನ್ನೆಲೆಯಲ್ಲಿ ಮುಖ್ಯ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕ, ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆಯ ಕಾರ್ಯದರ್ಶಿ ಹಾಗೂ ಆಯುಕ್ತರು, ಮಧುರೈ ಜಿಲ್ಲಾಧಿಕಾರಿ, ಪೊಲೀಸ್ ಆಯುಕ್ತರು, ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನೋಟಿಸ್ ನೀಡಲಾಗಿದೆ. ಮೂರು ದಿನಗಳೊಳಗೆ ಎಲ್ಲರಿಗೂ ವೈಯಕ್ತಿಕವಾಗಿ ನೋಟಿಸ್ ತಲುಪಿಸಿ, ಅದನ್ನು ಖಚಿತಪಡಿಸುವ ಪ್ರಮಾಣಪತ್ರ ಸಲ್ಲಿಸುವಂತೆ ಮುಖ್ಯ ಕಾರ್ಯದರ್ಶಿಗೆ ಸೂಚಿಸಲಾಗಿದೆ.

ಇದೇ ವೇಳೆ ದೇವಸ್ಥಾನದ ಆಡಳಿತ ಮಂಡಳಿಯನ್ನು ಅಮಾನತುಗೊಳಿಸಿರುವ ಸುಪ್ರೀಂ ಕೋರ್ಟ್, ನಿವೃತ್ತ ನ್ಯಾಯಮೂರ್ತಿಗಳಾದ ವೈದ್ಯನಾಥನ್ ಮತ್ತು ಪಾರ್ಥಿಬನ್ ಅವರನ್ನು ದೇವಸ್ಥಾನದ ಆಡಳಿತ ಮೇಲ್ವಿಚಾರಣೆಗೆ ರಿಸೀವರ್‌ಗಳಾಗಿ ನೇಮಿಸಿದೆ.


ತಮಿಳುನಾಡು ಪೊಲೀಸರಿಂದ ನ್ಯಾಯಾಲಯದ ಆದೇಶದ ಅನುಷ್ಠಾನದಲ್ಲಿ ವಿಫಲತೆ ಕಂಡುಬಂದ ಹಿನ್ನೆಲೆಯಲ್ಲಿ ತಿರುಪ್ಪರಂಕುಂದ್ರಂ ಬೆಟ್ಟ ಹಾಗೂ ದೇವಸ್ಥಾನದ ಭದ್ರತೆಯನ್ನು ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ವಶಕ್ಕೆ ಒಪ್ಪಿಸಲಾಗಿದೆ. ದೇವಸ್ಥಾನ ಮತ್ತು ದರ್ಗಾದಲ್ಲಿ ಶಾಂತಿ ಕಾಪಾಡುವುದರ ಜತೆಗೆ ಭಕ್ತರು ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಲು ಅಗತ್ಯ ಭದ್ರತೆ ಒದಗಿಸುವಂತೆ ನ್ಯಾಯಾಲಯ ಸೂಚಿಸಿದೆ. ಮಧುರೈನಲ್ಲಿ ದೀಪಂ ಬೆಳಗಿಸುವ ವಿಚಾರ ಇದೀಗ ತಮಿಳುನಾಡು ಸರ್ಕಾರ ಮತ್ತು ಸುಪ್ರೀಂ ಕೋರ್ಟ್ ನಡುವಿನ ಗಂಭೀರ ಕಾನೂನು ಸಂಘರ್ಷಕ್ಕೆ ಕಾರಣವಾಗಿದೆ.

ರಣಬೀರ್ ಕಪೂರ್ ನಟನೆಯ ರಾಮಾಯಣ ಚಿತ್ರಕ್ಕೆ ತಡೆ ನೀಡದ ಸುಪ್ರೀಂ ಕೋರ್ಟ್

ನವದೆಹಲಿ,ನ.27: ನಟ ರಣಬೀರ್ ಕಪೂರ್ ಅಭಿನಯದ 'ರಾಮಾಯಣ' ಚಿತ್ರದ ವಿರುದ್ಧ ಸಲ್ಲಿಕೆಯಾಗಿರುವ ಅರ್ಜಿಯನ್ನು ತುರ್ತು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಚಿತ್ರದ ಮೂಲಕ ರಾಮಾಯಣದ ಹಲವು ಸಂಗತಿಗಳನ್ನು ತಪ್ಪಾಗಿ ಚಿತ್ರಿಸಲಾಗಿದೆ ಎಂಬ ಅರ್ಜಿದಾರರ ವಾದಕ್ಕೆ ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜೋಯ್ಮಾಲ್ಯ ಬಾಗ್ಚಿ ಮತ್ತು ವಿ. ಮೊಹನಾ ಅವರನ್ನೊಳಗೊಂಡ ತ್ರಿಸದಸ್ಯ ಪೀಠದ ಮುಂದೆ ಅರ್ಜಿ ವಿಚಾರಣೆಗೆ ಬಂದಿತ್ತು. ನವೆಂಬರ್ 23ರಂದು ಅರ್ಜಿ ನೋಂದಣಿಯಾಗಿದ್ದರೂ ವಿಚಾರಣೆಗೆ ಪಟ್ಟಿ ಮಾಡಿಲ್ಲ ಎಂದು ಅರ್ಜಿದಾರರ ಪರ ವಕೀಲರು ಗಮನ ಸೆಳೆದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ನ್ಯಾಯಮೂರ್ತಿಗಳು, ಚಿತ್ರ ಈಗಾಗಲೇ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿದೆ. ನೋಡಬೇಕೆಂದಿದ್ದವರು ಈಗಾಗಲೇ ಚಿತ್ರ ವೀಕ್ಷಿಸಿದ್ದಾರೆ ಎಂದು ತಿಳಿಸಿದರು.

ಚಿತ್ರದಲ್ಲಿ ಹಲವು ಸಂಗತಿಗಳನ್ನು ತಪ್ಪಾಗಿ ತೋರಿಸಲಾಗಿದೆ. ಇದರಿಂದ ಹೊಸ ಪೀಳಿಗೆಯ ಮೇಲೆ ಪರಿಣಾಮ ಬೀರಬಹುದು ಎಂದು ವಕೀಲರು ವಾದಿಸಿದರು. ಆಗ ನ್ಯಾಯಮೂರ್ತಿ ಜೋಯ್ಮಾಲ್ಯ ಬಾಗ್ಚಿ, ಚಿತ್ರ ನಿರ್ಮಾಪಕರು ತಮ್ಮ ಗ್ರಹಿಕೆಯಂತೆ ಸಿನಿಮಾ ಮಾಡಿದ್ದಾರೆ. ನಿಮಗೆ ರಾಮಾಯಣದ ಬಗ್ಗೆ ಭಿನ್ನ ಅಭಿಪ್ರಾಯವಿದ್ದರೆ ನಿಮ್ಮದೇ ದೃಷ್ಟಿಕೋನದಲ್ಲಿ ಸಿನಿಮಾ ನಿರ್ಮಿಸಿ. ನ್ಯಾಯಾಲಯದ ಸಮಯವನ್ನು ವ್ಯರ್ಥ ಮಾಡಬೇಡಿ ಎಂದು ಖಾರವಾಗಿ ಪ್ರತಿಕ್ರಿಯಿಸಿದರು.



ಅರ್ಜಿಯನ್ನು ಶೀಘ್ರ ವಿಚಾರಣೆಗೆ ಕೈಗೆತ್ತಿಕೊಳ್ಳುವಂತೆ ವಕೀಲರು ಮತ್ತೆ ಮನವಿ ಮಾಡಿದಾಗ, ಸೂಕ್ತ ಸಮಯದಲ್ಲಿ ವಿಚಾರಣೆಗೆ ಪಟ್ಟಿ ಮಾಡಲಾಗುವುದು ಎಂದು ನ್ಯಾಯಪೀಠ ತಿಳಿಸಿತು. ನಿತೇಶ್ ತಿವಾರಿ ನಿರ್ದೇಶನದ ಈ ಚಿತ್ರದಲ್ಲಿ ರಣಬೀರ್ ಕಪೂರ್ ರಾಮನಾಗಿ, ಸಾಯಿ ಪಲ್ಲವಿ ಸೀತೆಯಾಗಿ ಹಾಗೂ ಯಶ್ ರಾವಣನಾಗಿ ನಟಿಸಿದ್ದಾರೆ.

ಕೇಜ್ರಿವಾಲ್‌ರ ಶೀಶಮಹಲ್ ಸಾರ್ವಜನಿಕರ ವೀಕ್ಷಣೆಗೆ ಮುಕ್ತ

ನವದೆಹಲಿ,ನ.27: ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ವಿವಾದಿತ ಸರ್ಕಾರಿ ನಿವಾಸ ಶೀಶಮಹಲ್ ಅನ್ನು ದೆಹಲಿ ಸರ್ಕಾರ ಶುಕ್ರವಾರ ಮೊದಲ ಬಾರಿಗೆ ಮಾಧ್ಯಮದವರ ವೀಕ್ಷಣೆಗೆ ಮುಕ್ತಗೊಳಿಸಿದೆ. ನಿವಾಸದ ಒಳಾಂಗಣ ವಿನ್ಯಾಸ, ಐಷಾರಾಮಿ ಪೀಠೋಪಕರಣಗಳು ಹಾಗೂ ಅವುಗಳ ವೆಚ್ಚದ ವಿವರಗಳನ್ನು ಸಾರ್ವಜನಿಕರಿಗೆ ತಿಳಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಉತ್ತರ ದೆಹಲಿಯ 6, ಫ್ಲ್ಯಾಗ್‌ಸ್ಟಾಫ್ ರಸ್ತೆಯಲ್ಲಿರುವ ಈ ನಿವಾಸದಲ್ಲಿ 11 ಲಕ್ಷ ರೂ. ಮೌಲ್ಯದ ಝೂಮರ್, 30 ಲಕ್ಷ ರೂ. ಮೌಲ್ಯದ ಟಿವಿ ಘಟಕ, 5.47 ಲಕ್ಷ ರೂ. ಮೌಲ್ಯದ ಸೋಫಾ ಹಾಗೂ 6.71 ಲಕ್ಷ ರೂ. ಮೌಲ್ಯದ ದೇವರ ಕೋಣೆ ಸೇರಿದಂತೆ ಹಲವು ದುಬಾರಿ ಸೌಲಭ್ಯಗಳನ್ನು ಪ್ರದರ್ಶಿಸಲಾಗಿದೆ. ಪ್ರತಿಯೊಂದು ವಸ್ತುವಿನ ವೆಚ್ಚದ ವಿವರ ಹಾಗೂ ಖರೀದಿ ದಾಖಲೆಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ.

58 ಕೋಟಿ ರೂ. ವೆಚ್ಚದಲ್ಲಿ ನಿವಾಸವನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಲೋಕೋಪಯೋಗಿ ಸಚಿವ ಪರ್ವೇಶ್ ವರ್ಮಾ ತಿಳಿಸಿದ್ದಾರೆ. ತೆರಿಗೆದಾರರ ಹಣವನ್ನು ಹೇಗೆ ಖರ್ಚು ಮಾಡಲಾಗಿದೆ ಎಂಬುದನ್ನು ಜನರಿಗೆ ತಿಳಿಸುವುದೇ ಸರ್ಕಾರದ ಉದ್ದೇಶ ಎಂದು ಅವರು ಹೇಳಿದ್ದಾರೆ. ಕೋವಿಡ್ ಅವಧಿಯಲ್ಲೂ ನಿವಾಸದ ಕಾಮಗಾರಿ ಮುಂದುವರಿದಿತ್ತು ಎಂದು ಆರೋಪಿಸಿದ್ದಾರೆ.



ಕೇಜ್ರಿವಾಲ್ ಅವರು 2015ರಿಂದ 2024ರವರೆಗೆ ಈ ನಿವಾಸದಲ್ಲಿ ವಾಸವಿದ್ದರು. ಬಿಜೆಪಿ ಈ ನಿವಾಸಕ್ಕೆ ಶೀಶ್ ಮಹಲ್ ಎಂದು ಹೆಸರಿಟ್ಟು ಐಷಾರಾಮಿ ವೆಚ್ಚದ ಕುರಿತು ಆರೋಪ ಮಾಡುತ್ತಾ ಬಂದಿದೆ. ಆದರೆ ಆಮ್ ಆದ್ಮಿ ಪಕ್ಷ ಈ ಆರೋಪಗಳನ್ನು ತಳ್ಳಿಹಾಕಿದೆ. ಮುಂದಿನ ದಿನಗಳಲ್ಲಿ ಸಾರ್ವಜನಿಕರಿಗೂ ನಿವಾಸ ವೀಕ್ಷಣೆಗೆ ಅವಕಾಶ ಕಲ್ಪಿಸಲು ಸರ್ಕಾರ ನಿರ್ಧರಿಸಿದೆ.

ಆನ್‌ಲೈನ್ ಟಿಕೆಟ್ ವ್ಯವಸ್ಥೆ ಜಾರಿಗೆ ತರಲು ಸಿದ್ಧತೆ ನಡೆಸಿದ್ದು, ಪ್ರವೇಶ ಶುಲ್ಕ ಸುಮಾರು 20 ರೂ. ಇರಬಹುದು. ಹಿರಿಯ ನಾಗರಿಕರು ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ನೀಡುವ ಸಾಧ್ಯತೆಯಿದೆ. ಸಾರ್ವಜನಿಕರ ವೀಕ್ಷಣೆಯ ಬಳಿಕ ಖಾಸಗಿ ಆತಿಥ್ಯ ಸಂಸ್ಥೆಯೊಂದಕ್ಕೆ ಕಟ್ಟಡದ ನಿರ್ವಹಣೆ ವಹಿಸುವ ಯೋಜನೆಯೂ ಸರ್ಕಾರದ ಮುಂದಿದೆ.

ದೇಶದ 2/3ರಷ್ಟು ಯುವಕರಲ್ಲಿ ವಿಟಮಿನ್ ಬಿ12 ಕೊರತೆ: ಐಸಿಎಂಆರ್

ನವದೆಹಲಿ, ನ. 27: ದೇಶದ ಮೂರನೇ ಎರಡರಷ್ಟು ಹದಿಹರೆಯದವರು ವಿಟಮಿನ್ ಬಿ12 ಕೊರತೆಯಿಂದ ಬಳಲುತ್ತಿದ್ದಾರೆ ಎಂಬ ಕಳವಳಕಾರಿ ಅಂಶ ರಾಷ್ಟ್ರೀಯ ಸಮೀಕ್ಷೆಯಿಂದ ಹೊರಬಿದ್ದಿದೆ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಹಾಗೂ ರಾಷ್ಟ್ರೀಯ ಪೌಷ್ಟಿಕಾಂಶ ಸಂಸ್ಥೆ (ಎನ್‌ಐಎನ್) ನಡೆಸಿದ ಸಂಪದ (2023–25) ಸಮೀಕ್ಷೆಯ ಪ್ರಕಾರ, 10ರಿಂದ 19 ವರ್ಷದೊಳಗಿನ ಶೇ 66.1ರಷ್ಟು ಬಾಲಕರು ಹಾಗೂ ಶೇ 65.4ರಷ್ಟು ಬಾಲಕಿಯರಲ್ಲಿ ವಿಟಮಿನ್ ಬಿ12 ಪ್ರಮಾಣ ಅಗತ್ಯಕ್ಕಿಂತ ಕಡಿಮೆ ಇರುವುದು ದೃಢಪಟ್ಟಿದೆ.

ವಿಟಮಿನ್ ಬಿ12 ಕೊರತೆ ಕೇವಲ ಹದಿಹರೆಯದವರಿಗೆ ಮಾತ್ರ ಸೀಮಿತವಾಗಿಲ್ಲ; ಮಕ್ಕಳು, ಮಹಿಳೆಯರು ಹಾಗೂ ಪುರುಷರಲ್ಲಿಯೂ ವ್ಯಾಪಕವಾಗಿ ಕಂಡುಬಂದಿದೆ. 5ರಿಂದ 9 ವರ್ಷದೊಳಗಿನ ಶೇ 46.5ರಷ್ಟು ಮಕ್ಕಳು ಮತ್ತು 12ರಿಂದ 59 ತಿಂಗಳ ಶೇ 37.3ರಷ್ಟು ಮಕ್ಕಳಲ್ಲಿ ಈ ಕೊರತೆ ದಾಖಲಾಗಿದೆ. ಅಂತೆಯೇ ಶೇ 63.1ರಷ್ಟು ಗರ್ಭಿಣಿಯರು, ಶೇ 51.8ರಷ್ಟು ಹಾಲುಣಿಸುವ ತಾಯಂದಿರು, 15ರಿಂದ 49 ವರ್ಷದ ಶೇ.57.4ರಷ್ಟು ಮಹಿಳೆಯರು ಹಾಗೂ 20ರಿಂದ 59 ವರ್ಷದ ಶೇ 60.4ರಷ್ಟು ಪುರುಷರು ಬಿ12 ಕೊರತೆ ಎದುರಿಸುತ್ತಿದ್ದಾರೆ.

ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆಯೂ ಈ ಪ್ರಮಾಣದಲ್ಲಿ ವ್ಯತ್ಯಾಸ ಕಂಡುಬಂದಿದೆ. ಹದಿಹರೆಯದ ಬಾಲಕರಲ್ಲಿ ನಗರ ಪ್ರದೇಶದಲ್ಲಿ ಶೇ.68.6 ಹಾಗೂ ಗ್ರಾಮೀಣ ಭಾಗದಲ್ಲಿ ಶೇ.65.3ರಷ್ಟು ಕೊರತೆ ಇದ್ದರೆ, ಬಾಲಕಿಯರಲ್ಲಿ ಗ್ರಾಮೀಣ ಭಾಗದಲ್ಲಿ ಶೇ 66.5 ಹಾಗೂ ನಗರಗಳಲ್ಲಿ ಶೇ.61.7ರಷ್ಟು ದಾಖಲಾಗಿದೆ. ವಯಸ್ಕ ಪುರುಷರು ಮತ್ತು ಗರ್ಭಿಣಿಯರಲ್ಲಿ ನಗರ ಭಾಗದಲ್ಲೇ ಕೊರತೆ ಹೆಚ್ಚಿದೆ. 60 ವರ್ಷ ಮೇಲ್ಪಟ್ಟವರಲ್ಲಿ ಶೇ 46.8ರಷ್ಟು ಪುರುಷರು ಹಾ

ಜಾತಿ, ಧರ್ಮದ ಭೇದವಿಲ್ಲದೆ ಎಲ್ಲ ವರ್ಗದ ಜನರಿಗೂ ಸೇವೆ: ಸಿಎಂ ಡಿ.ಕೆ. ಶಿವಕುಮಾರ್

ಉತ್ತಮ ಸಮಾಜ ನಿರ್ಮಾಣಕ್ಕೆ ಆದಿಚುಂಚನಗಿರಿ ಮಠದ ಶಿಕ್ಷಣ, ಆರೋಗ್ಯಸೇವೆ ಅಡಿಪಾಯ



ಬೆಂಗಳೂರು, ನ.27: ಆದಿಚುಂಚನಗಿರಿ ಮಠ ನೀಡುತ್ತಿರುವ ಶಿಕ್ಷಣ, ಆರೋಗ್ಯ ಸೇವೆ ಉತ್ತಮ ಸಮಾಜ ನಿರ್ಮಾಣಕ್ಕೆ ಅಡಿಪಾಯ ಹಾಕುತ್ತಿದೆ. ಬಿಜಿಎಸ್ ಸಂಸ್ಥೆ ಇಂದು ಹುಟ್ಟಿ ನಾಳೆ ಸಾಯುವ ಹುಲ್ಲುಕಡ್ಡಿಯಲ್ಲ. ಇದು ನೂರಾರು ವರ್ಷ ಬಾಳುವ ಆಲದ ಮರ ಇದ್ದಂತೆ. ಪೂಜ್ಯ ಬಾಲಗಂಗಾಧರನಾಥ ಸ್ವಾಮೀಜಿಯವರು ನೆಟ್ಟ ಈ ಆಲದ ಮರದ ನೆರಳು ಇಂದು ದೇಶ–ವಿದೇಶಗಳಲ್ಲೂ ವ್ಯಾಪಿಸಿದೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ಬಣ್ಣಿಸಿದರು.

ಕೆಂಗೇರಿಯ ಬಿಜಿಎಸ್ ಮೈದಾನದಲ್ಲಿ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಶುಕ್ರವಾರ ಆಯೋಜಿಸಿದ್ದ 18ನೇ ಬಿಜಿಎಸ್ ಫೌಂಡೇಷನ್ ಡೇ ಮತ್ತು ಬಿಜಿಎಸ್ ಉತ್ಸವ ಉದ್ಘಾಟಿಸಿ ಮಾತನಾಡಿ, ಮಂಡ್ಯ ಜಿಲ್ಲೆಯ ಒಂದು ಕುಗ್ರಾಮದಲ್ಲಿದ್ದ ಚುಂಚನಗಿರಿ ಮಠ ಇಂದು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿ ಕೊಂಡಿದೆ. ಇದಕ್ಕೆ ಬಾಲಗಂಗಾಧರನಾಥ ಸ್ವಾಮೀಜಿಯವರ ದೂರದೃಷ್ಟಿ, ಪರಿಶ್ರಮ ಮತ್ತು ಸಮಾಜಮುಖಿ ಚಿಂತನೆಗಳೇ ಕಾರಣ. ಶ್ರೀಗಳು ನಮ್ಮೊಂದಿಗೆ ದೈಹಿಕವಾಗಿ ಇಲ್ಲದಿರಬಹುದು. ಆದರೆ ಅವರು ಹಾಕಿಕೊಟ್ಟ ಮಾರ್ಗದರ್ಶನ ಮತ್ತು ಆಶೀರ್ವಾದದಿಂದ ಸುಮಾರು 500ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು ಇಂದು ದೇಶ–ವಿದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಅವರ ಆಶಯದಂತೆ ಮಠದ ಸೇವಾ ಕಾರ್ಯಗಳು ಮುಂದುವರಿಯುತ್ತಿವೆ" ಎಂದು ಹೇಳಿದರು.

"ಹಿರಿಯ ಸ್ವಾಮೀಜಿಯವರ ಹಾದಿಯಲ್ಲೇ ನಿರ್ಮಲಾನಂದನಾಥ ಸ್ವಾಮೀಜಿ ಯವರು ಮುನ್ನಡೆಯುತ್ತಿದ್ದಾರೆ. ಮಠದ ಸೇವಾ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಜಾತಿ, ಧರ್ಮದ ಆಧಾರದಲ್ಲಿ ಯಾವುದೇ ತಾರತಮ್ಯ ಮಾಡದೆ ಸಮಾಜದ ಎಲ್ಲಾ ವರ್ಗಗಳಿಗೂ ಸೇವೆ ಸಲ್ಲಿಸುತ್ತಿರುವುದು ವಿಶೇಷ ಎಂದರು.

ವಿದ್ಯೆಯ ಜೊತೆಗೆ ಸಂಸ್ಕಾರ, ಸಂಸ್ಕೃತಿ ಕ್ರೀಡೆಯ ಕಡೆಗೂ ಗಮನಕೊಡಿ

ಚುಂಚನಗಿರಿ ಮಠ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದರ ಜೊತೆಗೆ ಸಂಸ್ಕಾರ ಮತ್ತು ಸಂಸ್ಕೃತಿಗೂ ವಿಶೇಷ ಗಮನ ಹರಿಸುತ್ತಿದೆ. ವಿದ್ಯಾರ್ಥಿಗಳು ಕೇವಲ ವಿದ್ಯಾವಂತರಾದರೆ ಸಾಲದು. ಉತ್ತಮ ಸಂಸ್ಕಾರ ಹೊಂದಿರಬೇಕು. ಕ್ರೀಡೆ, ಜ್ಞಾನ ಮತ್ತು ಜೀವನಮೌಲ್ಯಗಳಲ್ಲೂ ಬೆಳೆಯಬೇಕು. ಇಂದಿನ ವಿದ್ಯಾರ್ಥಿಗಳು ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು". "ವಿದ್ಯಾದಾನಕ್ಕಿಂತ ದೊಡ್ಡ ಧರ್ಮ ಮತ್ತೊಂದಿಲ್ಲ ಎಂಬ ಮಾತನ್ನು ಚುಂಚನಗಿರಿ ಮಠ ತನ್ನ ಕಾರ್ಯದ ಮೂಲಕ ನಿಜ ಮಾಡಿದೆ. ಮನುಷ್ಯನಿಗೆ ವಿದ್ಯೆ ಇದ್ದರೆ ವಿನಯ ಬರುತ್ತದೆ. ವಿನಯದಿಂದ ಯೋಗ್ಯತೆ, ಯೋಗ್ಯತೆಯಿಂದ ಹಣ, ಹಣದಿಂದ ಧರ್ಮ, ಧರ್ಮದಿಂದ ಸುಖ ಲಭಿಸುತ್ತದೆ. ಪ್ರತಿಯೊಬ್ಬರೂ ತಮ್ಮ ಧರ್ಮವನ್ನು ಪಾಲಿಸಿಕೊಂಡು ಸುಖವಾಗಿ ಬದುಕಬೇಕು. 'ಮಾನವನ ಸೇವೆಯೇ ಮಾಧವನ ಸೇವೆ' ಎಂಬ ಘೋಷವಾಕ್ಯದ ಮೂಲಕ ಮಠ ಜನರಲ್ಲಿ ಅರಿವು ಮೂಡಿಸುತ್ತಿದೆ" ಎಂದು ಡಿ.ಕೆ. ಶಿವಕುಮಾರ್ ಹೇಳಿದರು.



ವಿಜಯನಗರ ಬಿಜೆಪಿ ಓಬಿಸಿ ಮೋರ್ಚಾ ವತಿಯಿಂದ 539ನೇ ಶ್ರೀಕನಕದಾಸರ ಜಯಂತಿಯನ್ನು ವಿಜಯನಗರ ಬಿಜೆಪಿ ಮಂಡಲ ಕಛೇರಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ವಿಜಯನಗರ ಬಿಜೆಪಿ ಮಂಡಲ ಪ್ರಧಾನ ಕಾರ್ಯದರ್ಶಿ ಎ.ಜೆ.ಆನಂದ್‌ಗೌಡ ಭಾಗಿಯಾಗಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ವಿಜಯನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಕಾರ್ಯಕರ್ತರಾದ ಶ್ರೀಮತಿ ರಾಜೇಶ್ವರಿ, ಶ್ರೀಮತಿ ಗೀತಾ, ಶ್ರೀಮತಿ ಸರಿತಾ, ಶ್ರೀಮತಿಧನಲಕ್ಷ್ಮಿ, ಶ್ರೀಮತಿ ಶಿವಮ್ಮ, ಶ್ರೀಮತಿ ವಸಂತ, ಬಿಜೆಪಿ ನಾಯಕ ಗಂಗಾಧರ, ಬಿಜೆಪಿ ಮುಖಂಡ ವೀರೇಶ್ ಭಾಗಿಯಾಗಿ ಕನಕದಾಸರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ವಿದ್ಯುತ್ ಸರಬರಾಜು ಕಂಪನಿಗಳಿಂದ ಗ್ರಾಹಕರಿಗೆ ಸಿಹಿಸುದ್ದಿ: ಲಾಭದ ಒಂದು ಭಾಗ ಮರಳಿಸಲು ನಿರ್ಧಾರ

2027ರ ಏಪ್ರಿಲ್‌ನಿಂದ ಪ್ರತಿ ಯೂನಿಟ್‌ಗೆ 35 ಪೈಸೆ ಮರುಪಾವತಿಗೆ ಬೆಸ್ಕಾಂ ಪ್ರಸ್ತಾವನೆ, ಇತರ ಕಂಪನಿಗಳಿಗೆ 16 ಪೈಸೆ ಸಿಗುವ ನಿರೀಕ್ಷೆ



ಬೆಂಗಳೂರು, ನ.27: ವಿದ್ಯುತ್ ಬಿಲ್ ಏರಿಕೆಯಿಂದ ಕಂಗಾಲಾಗಿರುವ ಬೆಸ್ಕಾಂ ಗ್ರಾಹಕರಿಗೆ ಸಿಹಿಸುದ್ದಿ ಸಿಕ್ಕಿದೆ. 2027ರ ಏಪ್ರಿಲ್‌ನಿಂದ ವಿದ್ಯುತ್ ಬಳಕೆದಾರರಿಗೆ ಪ್ರತಿ ಯೂನಿಟ್‌ಗೆ 35 ಪೈಸೆಯಷ್ಟು ಹಣವನ್ನು ಮರುಪಾವತಿ ಮಾಡುವ ಪ್ರಸ್ತಾವನೆ ಇದೆ.

ವಿದ್ಯುತ್ ಸರಬರಾಜು ಕಂಪನಿಗಳು ಗಳಿಸಿರುವ ಲಾಭದ ಒಂದು ಭಾಗವನ್ನು ಗ್ರಾಹಕರಿಗೆ ಮರಳಿಸಲು ನಿರ್ಧರಿಸಿವೆ. ಕರ್ನಾಟಕದ ಬಹುತೇಕ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ 16 ಪೈಸೆ ಮರುಪಾವತಿ ಸಿಗುವ ನಿರೀಕ್ಷೆಯಿದೆ. ಆದರೆ ಬೆಸ್ಕಾಂ ವ್ಯಾಪ್ತಿಯ ಗ್ರಾಹಕರಿಗೆ ಹೆಚ್ಚಿನ ಪ್ರಯೋಜನ ದೊರೆಯಲಿದೆ. ಈ ಪ್ರಸ್ತಾವನೆಗೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಅನುಮೋದನೆ ದೊರೆಯಬೇಕಿದೆ.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಬೆಂಗಳೂರು ನಗರ ಸೇರಿದಂತೆ ಎಂಟು ಜಿಲ್ಲೆಗಳಿವೆ. ಈ ವ್ಯಾಪ್ತಿಯ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ 35 ಪೈಸೆ ಮರುಪಾವತಿ ನೀಡುವ ಪ್ರಸ್ತಾವನೆಯನ್ನು ಬೆಸ್ಕಾಂ ಮುಂದಿಟ್ಟಿದೆ. 2027ರ ಏಪ್ರಿಲ್‌ನಿಂದ ಆರಂಭವಾಗುವ ಬಿಲ್‌ನಲ್ಲಿ ಈ ಪ್ರಯೋಜನ ಸಿಗುವ ನಿರೀಕ್ಷೆಯಿದೆ. ಈ ಮರುಪಾವತಿ 12 ತಿಂಗಳ ಅವಧಿಗೆ ಅನ್ವಯವಾಗಲಿದೆ. ಇನ್ನು ಕರ್ನಾಟಕದ ಇತರ ಬಹುತೇಕ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಪ್ರತಿ ಯೂನಿಟ್‌ಗೆ 16 ಪೈಸೆ ಮರುಪಾವತಿ ಸಿಗಲಿದೆ. ಆದರೆ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಉತ್ತರ ಕರ್ನಾಟಕದ ಏಳು ಜಿಲ್ಲೆಗಳಿಗೆ ಈ ಪ್ರಯೋಜನ ಇರುವುದಿಲ್ಲ.

ಕಳೆದ ಹಣಕಾಸು ವರ್ಷದಲ್ಲಿ ಲಾಭ ಗಳಿಸದ ಹಿನ್ನೆಲೆಯಲ್ಲಿ ಹೆಸ್ಕಾಂ ಗ್ರಾಹಕರಿಗೆ ಮರುಪಾವತಿ ನೀಡುವ ಬದಲು ಪ್ರತಿ ಯೂನಿಟ್‌ಗೆ ಕೆಲವು ಪೈಸೆಗಳಷ್ಟು ದರ ಏರಿಕೆ ಮಾಡುವ ಪ್ರಸ್ತಾವನೆ ಸಲ್ಲಿಸುವ ಸಾಧ್ಯತೆಯಿದೆ. 2025–26ನೇ ಹಣಕಾಸು ವರ್ಷದಲ್ಲಿ ಬೆಸ್ಕಾಂ 293.6 ಕೋಟಿ ರೂ. ಲಾಭ ಗಳಿಸಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಈ ಹಿಂದೆ ತಿಳಿಸಿದ್ದರು.

ವಿದ್ಯುತ್ ಬಿಲ್ ಸಂಗ್ರಹದಲ್ಲಿ ಸುಧಾರಣೆ, ಸರಿಯಾದ ಮೀಟರ್ ರೀಡಿಂಗ್, ಬಾಕಿ ವಸೂಲಿ ಹಾಗೂ ವಿದ್ಯುತ್ ಖರೀದಿ ವೆಚ್ಚ ಕಡಿಮೆಯಾಗಿರುವುದು ಲಾಭಕ್ಕೆ ಪ್ರಮುಖ ಕಾರಣಗಳಾಗಿವೆ. ಅಲ್ಲದೆ, ವಿದ್ಯುತ್ ವಿತರಣೆಯಲ್ಲಿನ ನಷ್ಟದ ಪ್ರಮಾಣ ಶೇ.10ಕ್ಕಿಂತ ಕೆಳಕ್ಕೆ ಇಳಿದಿದೆ. ವಿದ್ಯುತ್ ಖರೀದಿ ವೆಚ್ಚ ಕಡಿಮೆಯಾಗಿರುವುದು ಮತ್ತು ಕಾರ್ಯಾಚರಣೆಯ ದಕ್ಷತೆ ಹೆಚ್ಚಿರುವುದರಿಂದ ಬಹುತೇಕ ಎಸ್ಕಾಂಗಳು 2025–26ರಲ್ಲಿ ಲಾಭದ ಹಾದಿಗೆ ಮರಳಿವೆ. ಈ ಹಿನ್ನೆಲೆಯಲ್ಲಿ ಲಾಭದ ಒಂದು ಭಾಗವನ್ನು ಗ್ರಾಹಕ ರಿಗೆ ಮರಳಿಸಲು ನಿರ್ಧರಿಸಲಾಗಿದೆ.

ಆದರೆ ಅಂತಿಮ ಮರುಪಾವತಿ ಮೊತ್ತ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಸುಂಕ ನಿರ್ಧಾರ ಪ್ರಕ್ರಿಯೆಗೆ ಒಳಪಟ್ಟಿರುತ್ತದೆ. ಅನುಮೋದನೆ ದೊರೆತ ಬಳಿಕವೇ ಗ್ರಾಹಕರ ವಿದ್ಯುತ್ ಬಿಲ್‌ನಲ್ಲಿ ಈ ಮೊತ್ತ ಹೊಂದಾಣಿಕೆಯಾಗಲಿದೆ. ಹೀಗಾಗಿ ಬೆಸ್ಕಾಂ ಗ್ರಾಹಕರು 2027ರ ಏಪ್ರಿಲ್‌ನಿಂದ ವಿದ್ಯುತ್ ಬಿಲ್‌ನಲ್ಲಿ ಕೊಂಚ ರಿಲೀಫ್ ನಿರೀಕ್ಷಿಸಬಹುದು.

ರೇಣುಕಾಸ್ವಾಮಿ ಕೊಲೆ ಪ್ರಕರಣ

ಆರೋಪಿಗಳ ಜಾಮೀನು ರದ್ದು ಕೋರಿ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿದ ಸುಪ್ರೀಂ



ನವದೆಹಲಿ/ಬೆಂಗಳೂರು, ನ.27: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಕೇಸ್‌ನ ಐವರು ಆರೋಪಿಗಳಿಗೆ ನೀಡಲಾಗಿದ್ದ ಜಾಮೀನು ರದ್ದು ಮಾಡುವಂತೆ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಎ–3 ಪವನ್, ಎ5 ನಂದೀಶ್, ಎ9 ಧನರಾಜ್, ಎ10 ವಿನಯ್ ಹಾಗೂ ರಾಘವೇಂದ್ರಗೆ ನೀಡಲಾಗಿದ್ದ ಜಾಮೀನು ರದ್ದು ಮಾಡುವಂತೆ ಸುಪ್ರೀಂಕೋರ್ಟ್‌ಗೆ ಪ್ರಾಸಿಕ್ಯೂಷನ್ ಅರ್ಜಿ ಸಲ್ಲಿಸಿತ್ತು.

ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಜೆಬಿ ಪರ್ದಿವಾಲ್ ಹಾಗೂ ವಿನೋದ್ ಚಂದ್ರನ್ ಪೀಠವು, ಒಂದೂವರೆ ವರ್ಷದ ಬಳಿಕ ಅರ್ಜಿ ಸಲ್ಲಿಸಿದೆ ಎಂದು ಅರ್ಜಿಯನ್ನು ವಜಾಗೊಳಿಸಿ, ಆದೇಶ ಹೊರಡಿಸಿದೆ.

ಈ ಹಿಂದೆ ಐವರ ಜಾಮೀನು ರದ್ದು ಮಾಡುವಂತೆ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿತ್ತು.

ಹೀಗಾಗಿ ಹೈಕೋರ್ಟ್ ಆದೇಶ ಪ್ರಶ್ನಿಸಿ ಪ್ರಾಸಿಕ್ಯೂಷನ್ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಇದೀಗ ಸುಪ್ರೀಂಕೋರ್ಟ್ ಅರ್ಜಿ ವಜಾಗೊಳಿಸಿದೆ.

ವಿಧಾನಸೌಧ, ಮುಖ್ಯಮಂತ್ರಿ ಮನೆಗೆ ಬಾಂಬ್ ಬೆದರಿಕೆ ಹಾಕಿದ್ದವನ ಬಂಧನ

ಬೆಂಗಳೂರು, ನ.27: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸದಾಶಿವನಗರ ನಿವಾಸ ಮತ್ತು ವಿಧಾನಸೌಧಕ್ಕೆ ಬಾಂಬ್ ಇಟ್ಟಿರುವುದಾಗಿ ಬೆದರಿಕೆ ಹಾಕಿದ್ದ ವ್ಯಕ್ತಿಯನ್ನು ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬ್ಯಾಡರಹಳ್ಳಿಯ ಬಾಲಾಜಿ ನಗರದ ಪಿಜಿಯೊಂದರಲ್ಲಿ ವಾಸವಾಗಿದ್ದ ಕಾರ್ತಿಕ್ (28) ಬಂಧಿತ ಆರೋಪಿ.

ಈತ ಆಸ್ಪತ್ರೆಯೊಂದರಲ್ಲಿ ಕೇರ್ ಟೇಕರ್ ಆಗಿ ಕೆಲಸ ಮಾಡಿಕೊಂಡಿದ್ದ. ಭಗವಂತರಾಯನ್ ಎಂಬುವವರು ತಮ ಯಾತ್ರಿ ಆಯಪ್ ಮೂಲಕ ಆಟೋ ಚಾಲನೆ ಮಾಡುತ್ತಿದ್ದರು. ಕಾರ್ತಿಕ್ ಎಂಬಾತ ಸದಾಶಿವನಗರದಿಂದ ಆರ್‌ಆರ್ ನಗರಕ್ಕೆ ತೆರಳಲು ಆಟೋ ಬುಕ್ ಮಾಡಿದ. ಆಟೋ ಬುಕ್ ಮಾಡಿದ ಕಾರ್ತಿಕ್ ಚಾಲಕನಿಗೆ ಪಿಕಪ್ ಲೊಕೇಷನ್ ಕಳುಹಿಸಿದ್ದು, ಅದು ಸಿಎಂ ಡಿ.ಕೆ.ಶಿವಕುಮಾರ್ ಅವರ ಸದಾಶಿವನಗರದ ನಿವಾಸ ಎಂದು ತೋರಿಸಿತು. ಹಾಗಾಗಿ ಕಳುಹಿಸಿದ ಲೊಕೇಷನ್‌ಗೆ ಬಂದ ಆಟೋಚಾಲಕ ಬುಕ್ ಮಾಡಿದ ವ್ಯಕ್ತಿಗೆ ಕರೆ ಮಾಡಿದ.

ಕರೆ ಸ್ವೀಕರಿಸಿದ ವ್ಯಕ್ತಿ ನಾನು ಸಿಎಂ ಮನೆಯಲ್ಲಿದ್ದೇನೆ. ಬ್ಯಾರಿಕೇಡ್ ಬಳಿ ಪೊಲೀಸರು ಇದ್ದಾರೆ. ಅವರಿಗೆ ಫೋನ್ ಕೊಡಿ ಎಂದು ಹೇಳಿದ್ದಾನೆ. ಆತ ಹೇಳಿದಂತೆ ಆಟೋ ಚಾಲಕ ಬ್ಯಾರಿಕೇಡ್ ಬಳಿ ಇದ್ದ ಪೊಲೀಸರಿಗೆ ಫೋನ್ ಕೊಟ್ಟಿದ್ದಾರೆ. ಪೊಲೀಸರು ಕರೆ ಸ್ವೀಕರಿಸುತ್ತಿದ್ದಂತೆ ಮಾತನಾಡಿದ ಅಪರಿಚಿತ ವ್ಯಕ್ತಿ ಸಿಎಂ ನಿವಾಸ ಹಾಗೂ ವಿಧಾನಸೌಧಕ್ಕೆ ಬಾಂಬ್ ಇಟ್ಟಿರುವುದಾಗಿ ಬೆದರಿಕೆ ಹಾಕಿ ಕರೆ ಕಟ್ ಮಾಡಿದ್ದಾನೆ. ಆಗ ಪೊಲೀಸರು ವಿಷಯವನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ.

ತಕ್ಷಣ ಬಾಂಬ್ ಪತ್ತೆದಳ, ಬಾಂಬ್ ನಿಷ್ಕ್ರಿಯ ದಳ ಹಾಗೂ ಇನ್ನಿತರ ಅಧಿಕಾರಿಗಳ ತಂಡಗಳು



ಮುಖ್ಯಮಂತ್ರಿ ನಿವಾಸ ಮತ್ತು ವಿಧಾನಸೌಧದ ಸುತ್ತಮುತ್ತ ತಪಾಸಣೆ ನಡೆಸಿದಾಗ ಯಾವುದೇ ಬಾಂಬ್ ಕಂಡುಬರದ ಕಾರಣ ಇದು ಒಂದು ಹುಸಿ ಕರೆ ಎಂದು ನಿಟ್ಟುಸಿರುಬಿಟ್ಟಿದ್ದಾರೆ. ನಂತರ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಪ್ರಕರಣ ದಾಖಲಾಗಿದ್ದು, ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡ ಪೊಲೀಸರು ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಿದ್ದಾರೆ.

814 ಉಪನ್ಯಾಸಕರ ನೇಮಕಾತಿಗೆ ಅರ್ಜಿಸಲು ಸಲ್ಲಿಸಲು ಡಿ.25 ಕಡೆಯ ದಿನ



ಬೆಂಗಳೂರು,ನ. 27– ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆಯ ವಿವಿಧ ವಿಷಯಗಳ ಒಟ್ಟು 814 ಉಪನ್ಯಾಸಕರ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಧಿಸೂಚನೆ ಹೊರಡಿಸಿದೆ.

ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಆರಂಭವಾಗಿದೆ. ಡಿಸೆಂಬರ್ 25 ಅರ್ಜಿ ಸಲ್ಲಿಸಲು ಹಾಗೂ ಶುಲ್ಕ ಪಾವತಿಸಲು ಡಿಸೆಂಬರ್ 26 ಕೊನೆ ದಿನ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಒಟ್ಟು ಉಪನ್ಯಾಸಕರ ಹುದ್ದೆಗಳಲ್ಲಿ ಉಳಿಕೆ ಮೂಲ ವೃಂದದ 778 ಹಾಗೂ ಕಲ್ಯಾಣ ಕರ್ನಾಟಕ ವೃಂದದ 36 ಹುದ್ದೆಗಳು ಸೇರಿವೆ ಎಂದು ಅವರು ವಿವರಿಸಿದ್ದಾರೆ.

ಸ್ನಾತಕೋತ್ತರ ಪದವಿ ಜತೆಗೆ ಬಿ.ಇಡಿ ಮಾಡಿರುವವರು ಅರ್ಜಿ ಸಲ್ಲಿಸಲು ಅರ್ಹರು. ಮಾರ್ಚ್ ತಿಂಗಳಲ್ಲಿ ಲಿಖಿತ ಪರೀಕ್ಷೆ ನಡೆಯಲಿದೆ ಎಂದು ಅವರು ತಿಳಿಸಿದ್ದಾರೆ.

ಕನ್ನಡ ವಿಷಯದಲ್ಲಿ 89 ಹುದ್ದೆ ಭರ್ತಿಗೆ ಅರ್ಜಿ ಕರೆಯಲಾಗಿದೆ. ಹಾಗೆಯೇ ಇಂಗ್ಲಿಷ್– 145, ಇತಿಹಾಸ– 50, ಅರ್ಥಶಾಸ್ತ್ರ– 90, ರಾಜ್ಯಶಾಸ್ತ್ರ– 25, ಸಮಾಜಶಾಸ್ತ್ರ– 25, ಭೂಗೋಳ ಶಾಸ್ತ್ರ– 10, ವಾಣಿಜ್ಯ ಶಾಸ್ತ್ರ– 150, ಭೌತಶಾಸ್ತ್ರ– 30, ರಸಾಯನಶಾಸ್ತ್ರ– 30, ಗಣಿತ– 30, ಜೀವಶಾಸ್ತ್ರ– 30, ಕಂಪ್ಯೂಟರ್ ಸೈನ್ಸ್– 110 ಹುದ್ದೆಗಳಿಗೆ ಅರ್ಜಿ ಕರೆದಿದ್ದು, ಅರ್ಹರು ನಿಗದಿತ ಅವಧಿಯೊಳಗೆ ಅರ್ಜಿ ಸಲ್ಲಿಸಬೇಕು ಎಂದು ಅವರು ತಿಳಿಸಿದ್ದಾರೆ. ಶೈಕ್ಷಣಿಕ ಅರ್ಹತೆ ಸೇರಿದಂತೆ ಇತರ ಹೆಚ್ಚಿನ ವಿವರಗಳಿಗೆ ಕೆಇಎ ವೆಬ್ ಸೈಟ್ ನೋಡಲು ಪ್ರಸನ್ನ ಅವರು ಸಲಹೆ ನೀಡಿದ್ದಾರೆ.

ಕಸ್ತೂರಿರಂಗನ್ ವರದಿಯ ನ್ಯೂನತೆ ಪರಿಶೀಲಿಸಲು ಉನ್ನತಮಟ್ಟದ ಸಮಿತಿ ರಚನೆ: ಸರ್ಕಾರದ ನಿರ್ಧಾರ

ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಡಿ ಕುನ್ಹಾ ನೇತೃತ್ವ, 9 ಸದಸ್ಯರ ಸಮಿತಿ

ಬೆಂಗಳೂರು, ನ.27: ಕಸ್ತೂರಿರಂಗನ್ ವರದಿ ನ್ಯೂನತೆಯ ಬಗ್ಗೆ ಪರಿಶೀಲನೆ ನಡೆಸಲು ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ರಚನೆಗೆ ನಿರ್ಧಾರ ಮಾಡಲಾಗಿದೆ.

ಯುನೆಸ್ಕೋ ಜೀವವೈವಿಧ್ಯ ತಾಣವಾದ ಪಶ್ಚಿಮ ಘಟ್ಟಗಳ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಅಧಿಸೂಚನೆಗೆ ಪರ್ಯಾಯವಾಗಿ ರಾಜ್ಯ ಸರ್ಕಾರವು ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಡಿ ಕುನ್ಹಾ ನೇತೃತ್ವದಲ್ಲಿ ಉನ್ನತಮಟ್ಟದ ಸಮಿತಿ ಹಾಗೂ ಗ್ರಾಮಮಟ್ಟದ ಸಮಿತಿಗಳನ್ನು ರಚಿಸಿದೆ.

ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಡಿ'ಕುನ್ಹಾ ಅವರ ಅಧ್ಯಕ್ಷತೆಯ ಒಂಬತ್ತು ಸದಸ್ಯರ ಸಮ

ಟನ್ ಕಬ್ಬಿಗೆ ೩,೫೦೦ ರೂ ಘೋಷಣೆ

ಕಬ್ಬುಬೆಳೆಗಾರರ 12 ದಿನಗಳ ಧರಣಿ ಸತ್ಯಾಗ್ರಹ ಅಂತ್ಯ: ಟನ್ ಕಬ್ಬಿಗೆ 3500 ರೂ. ಘೋಷಣೆ

ಬೀದರ್, ನ. 27: ನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿರುವ ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿ ಎದುರು ಕಳೆದ 12 ದಿನಗಳಿಂದ ನಡೆಯುತ್ತಿದ್ದ ಕಬ್ಬು ಬೆಳೆಗಾರರ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಗುರುವಾರ ರಾತ್ರಿ ಅಂತ್ಯಗೊಂಡಿದೆ.

ಜಿಲ್ಲಾಡಳಿತವು ಸಕ್ಕರೆ ಕಾರ್ಖಾನೆಗಳೊಂದಿಗೆ ಸಭೆ ನಡೆಸಿದ್ದು, ಸಂಜೆ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಧರಣಿ ಸ್ಥಳಕ್ಕೆ ಭೇಟಿ ನೀಡಿ ರೈತರೊಂದಿಗೆ ಮಾತುಕತೆ ನಡೆಸಿದರು. ಸಭೆಯ ವಿವರ ಹಂಚಿಕೊಂಡ ಜಿಲ್ಲಾಧಿಕಾರಿ, ಸಕ್ಕರೆ ಕಾರ್ಖಾನೆ ಮಾಲೀಕರೊಂದಿಗೆ ಸಭೆ ನಡೆಸಲಾಗಿದ್ದು, ಟನ್ ಕಬ್ಬಿಗೆ ರೂ.3,400 ಜೊತೆಗೆ ಹೆಚ್ಚುವರಿಯಾಗಿ 100 ಕೊಡಲು ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು. ಬೆಳಗಾವಿಯಲ್ಲಿ ರೂ3,800 ಮತ್ತು ಕಲಬುರಗಿಯಲ್ಲಿ ರೂ.3,600 ದರ ನೀಡಲಾಗುತ್ತಿದ್ದು, ಆಯಾ ಭಾಗದ ರಿಕವರಿ ರೇಟ್ ಆಧರಿಸಿ ಬೆಲೆ ನಿಗದಿಪಡಿಸಲಾಗಿದೆ ಎಂದು ವಿವರಿಸಿದರು.



ಬೀದರ್ ಜಿಲ್ಲಾಧಿಕಾರಿ ಭರವಸೆಯ ನಡುವೆಯೂ ಕೆಲವು ರೈತರು ಟನ್ ಕಬ್ಬಿಗೆ ರೂ.3,500 ನೀಡಬೇಕು ಮತ್ತು ಅದಕ್ಕಿಂತ ಹೆಚ್ಚಿನ ಬೆಲೆ ನಿಗದಿಪಡಿಸಬೇಕು ಎಂದು ಪಟ್ಟು ಹಿಡಿದು, ಈ ಬೇಡಿಕೆ ಈಡೇರುವವರೆಗೆ ಧರಣಿ ಹಿಂಪಡೆಯುವುದಿಲ್ಲ ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ, ಸದ್ಯ ರೂ.3,500 ದರವನ್ನು ಒಪ್ಪಿಕೊಳ್ಳಬೇಕು, ಅದಕ್ಕಿಂತ ಹೆಚ್ಚಿನ ದರ ಕೊಡಿಸಲು ಎಲ್ಲಾ ರೀತಿಯಿಂದಲೂ ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು. ಅಂತಿಮವಾಗಿ ಜಿಲ್ಲಾಧಿಕಾರಿ ಮಾತಿಗೆ ಒಪ್ಪಿದ ರೈತರು ಧರಣಿ ಕೈಬಿಟ್ಟರು. ಬಹುತೇಕ ರೈತರು ಧರಣಿ ಸ್ಥಳದಿಂದ ನಿರ್ಗಮಿಸಿದರೂ, ಕೆಲವು ರೈತರು ಮಾತ್ರ ರೂ.3,500ಕ್ಕಿಂತ ಹೆಚ್ಚಿನ ಬೆಲೆ ಘೋಷಿಸುವವರೆಗೆ ಸ್ಥಳದಿಂದ ಕದಲುವುದಿಲ್ಲ ಎಂದು ಅಲ್ಲಿಯೇ ಕುಳಿತಿದ್ದರು. ಈ ಸಂದರ್ಭದಲ್ಲಿ ರೈತಸಂಘದ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ, ಮುಖಂಡರಾದ ಈಶ್ವರಸಿಂಗ್ ಠಾಕೂರ್, ಗುಂಡುರೆಡ್ಡಿ, ಶ್ರೀನಿವಾಸ್‌ರೆಡ್ಡಿ, ಕೆ.ಡಿ. ಗಣೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಇದಕ್ಕೂ ಮುನ್ನ, ರೈತ ಸಮನ್ವಯ ಸಮಿತಿ ಹಾಗೂ ರೈತ ಸಂಘದಿಂದ ನಡೆಯುತ್ತಿದ್ದ ಧರಣಿ ಸ್ಥಳಕ್ಕೆ ಶಾಸಕ ಡಾ.ಶೈಲೇಂದ್ರ ಕೆ.ಬೆಲ್ದಾಳೆ ಸೋಮವಾರ ಮಧ್ಯಾಹ್ನ ಭೇಟಿ ನೀಡಿ ಬೆಂಬಲ ವ್ಯಕ್ತಪಡಿಸಿದರು. ನಂತರ ಮಾತನಾಡಿದ ಅವರು, ರೈತರಿಗೆ ನ್ಯಾಯಯುತ ಬೆಲೆ ನಿಗದಿಪಡಿಸುವಂತೆ ಹಾಗೂ ಬೆಲೆ ಹೆಚ್ಚಳಕ್ಕೆ ಆಗ್ರಹಿಸಿ ನಡೆಯುತ್ತಿರುವ ಧರಣಿ ಸತ್ಯಾಗ್ರಹಕ್ಕೆ ತಮ್ಮ ಸಂಪೂರ್ಣ ಬೆಂಬಲವಿದೆ ಮತ್ತು ಸರ್ಕಾರ ಈ ವಿಷಯದಲ್ಲಿ ಸ್ಪಂದಿಸಬೇಕು ಎಂದು ಹೇಳಿದರು.

ಹುಬ್ಬಳ್ಳಿ ಕೇಂದ್ರ ಬಸ್‌ನಿಲ್ದಾಣಕ್ಕೆ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಹೆಸರಿಡಲು ಸರ್ಕಾರ ಅನುಮತಿ

ಹುಬ್ಬಳ್ಳಿ, ನ.27: ನಗರದ ಗೋಕುಲ ರಸ್ತೆಯಲ್ಲಿರುವ ಕೇಂದ್ರಿಯ ಬಸ್ ನಿಲ್ದಾಣಕ್ಕೆ 'ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಕೇಂದ್ರಿಯ ಬಸ್ ನಿಲ್ದಾಣ' ಎಂದು ನಾಮಕರಣ ಮಾಡಲು ರಾಜ್ಯ ಸರ್ಕಾರ ಅಧಿಕೃತ ಅನುಮತಿ ನೀಡಿದೆ. ಈ ಮೂಲಕ ರೆಡ್ಡಿ ಸಮಾಜದ ಹಲವು ವರ್ಷಗಳ ಬೇಡಿಕೆಗೆ ಸರ್ಕಾರ ಸ್ಪಂದಿಸಿದ್ದು, ಸಮಾಜದ ಮುಖಂಡರು ಹಾಗೂ ವಿವಿಧ ಸಂಘಟನೆಗಳಲ್ಲಿ ಸಂತಸ ವ್ಯಕ್ತವಾಗಿದೆ.

ಇತ್ತೀಚೆಗಷ್ಟೇ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯನ್ನು ಕಿತ್ತೂರು ರಾಣಿ ಚನ್ನಮ್ಮ ರಸ್ತೆ ಸಾರಿಗೆ ನಿಗಮ' ಎಂದು ಮರುನಾಮಕರಣ ಮಾಡಿದ್ದ ಸರ್ಕಾರ, ಇದೀಗ ಹುಬ್ಬಳ್ಳಿಯ ಪ್ರಮುಖ ಬಸ್ ನಿಲ್ದಾಣಕ್ಕೆ 15ನೇ ಶತಮಾನದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅವರ ಹೆಸರನ್ನಿಡಲು ನಿರ್ಧರಿಸಿದೆ.ಗೋಕುಲ ರಸ್ತೆಯಲ್ಲಿರುವ ಕೇಂದ್ರಿಯ ಬಸ್ ನಿಲ್ದಾಣಕ್ಕೆ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅವರ ಹೆಸರಿಡಬೇಕೆಂದು ರೆಡ್ಡಿ ಸಮಾಜ, ಹೇಮ-ವೇಮ ಸಂಘ, ಕಿತ್ತೂರು ರಾಣಿ ಚನ್ನಮ್ಮ ರಸ್ತೆ ಸಾರಿಗೆ ನಿಗಮದ ರೆಡ್ಡಿ ನೌಕರರ ಸಂಘ ಸೇರಿದಂತೆ ವಿವಿಧ ಸಂಘಟನೆಗಳು ಜಿಲ್ಲಾಡಳಿತ ಹಾಗೂ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದವು. ಈ ಮನವಿಗೆ ಸ್ಪಂದಿಸಿದ ಧಾರವಾಡ ಜಿಲ್ಲಾಧಿಕಾರಿ ಆ.18ರಂದು ರಾಜ್ಯ ಸರ್ಕಾರಕ್ಕೆ ನಾಮಕರಣದ ಪ್ರಸ್ತಾವನೆ ಸಲ್ಲಿಸಿದ್ದರು. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ, ಬಸ್ ನಿಲ್ದಾಣಕ್ಕೆ 'ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಕೇಂದ್ರಿಯ ಬಸ್ ನಿಲ್ದಾಣ' ಎಂದು ನಾಮಕರಣ ಮಾಡಲು ಅನುಮೋದನೆ ನೀಡಿದೆ. ಇದರಂತೆ ಸಾರಿಗೆ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು ನ.23ರಂದು ಅಧಿಕೃತ ಆದೇಶ ಹೊರಡಿಸಿದ್ದಾರೆ.

ನನ್ನ ಹೇಳಿಕೆ ತಪ್ಪಾಗಿ ಅರ್ಥೈಸಲಾಗಿದೆ: ವೀಡಿಯೋ ವೈರಲ್ ಆಗುತ್ತಿದ್ದಂತೆ ಸಚಿವರಿಂದ ಸ್ಪಷ್ಟನೆ

ಆಶಾ ಕಾರ್ಯಕರ್ತೆಯರ ಬೇಡಿಕೆಗಳ ಬಗ್ಗೆ ಸರ್ಕಾರಕ್ಕೆ ಸಹಾನುಭೂತಿ ಇದೆ: ಸಚಿವ ಯು.ಟಿ. ಖಾದರ್



ಶಿವಮೊಗ್ಗ, ನ.27: ಮಾಸಿಕ ವೇತನ 15 ಸಾವಿರಕ್ಕೆ ಹೆಚ್ಚಳ ಮಾಡುವಂತೆ ಸರ್ಕಾರವನ್ನು ಒತ್ತಾಯಿಸಿ ಕಳೆದ ಹತ್ತು ದಿನಗಳಿಂದ ಆಶಾ ಕಾರ್ಯಕರ್ತೆಯರು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಆರೋಗ್ಯ ಸಚಿವ ಯು.ಟಿ.ಖಾದರ್, ಆರೋಗ್ಯ ಇಲಾಖೆಗೆ ಆಶಾ ಕಾರ್ಯಕರ್ತೆಯರ ಅಗತ್ಯವಿಲ್ಲ ಎನ್ನುವಂತೆ ಹೇಳಿರುವ ವಿಡಿಯೋ ಸೋಷಿಯಲ್ ಮೀಡಿಯಾಗಳಲ್ಲಿ ವೈರಲ್ ಆಗುತ್ತಿದ್ದ ಬೆನ್ನಲ್ಲೇ, ಈಗ ಸಚಿವರು ತಮ್ಮ ಹೇಳಿಕೆಗೆ ಸ್ಪಷ್ಟನೆ ನೀಡಿದ್ದಾರೆ. ಆಶಾ ಕಾರ್ಯಕರ್ತೆಯರಿಲ್ಲದಿದ್ದರೂ ಆರೋಗ್ಯ ಇಲಾಖೆ ನಡೆಯುತ್ತದೆ ಎಂಬ ನನ್ನ ಮಾತನ್ನು ತಪ್ಪಾಗಿ ಅರ್ಥೈಸಲಾಗಿದೆ. ಆಶಾ ಕಾರ್ಯಕರ್ತೆಯರ ಸೇವೆಯನ್ನು ಕಡೆಗಣಿಸುವ ಉದ್ದೇಶ ನನ್ನದಾಗಿರಲಿಲ್ಲ ಎಂದು ಸಚಿವ ಯು.ಟಿ.ಖಾದರ್ ಹೇಳಿದ್ದಾರೆ.

ಆಶಾ ಕಾರ್ಯಕರ್ತೆಯರ ಬೇಡಿಕೆಗಳ ಬಗ್ಗೆ ಸರ್ಕಾರಕ್ಕೆ ಸಹಾನುಭೂತಿಯಿದೆ. ಸಿಎಂ ಡಿ.ಕೆ. ಶಿವಕುಮಾರ್ ಸಚಿವ ಸಂಪುಟ ಸಭೆಯ ನಡುವೆಯೂ ಆಶಾ ಕಾರ್ಯಕರ್ತೆಯರ ಪ್ರತಿನಿಧಿಗಳೊಂದಿಗೆ ಸುಮಾರು ಒಂದು ತಾಸು ಚರ್ಚೆ ನಡೆಸಿದ್ದಾರೆ. ಆಶಾ ಕಾರ್ಯಕರ್ತೆಯರ ಬಗ್ಗೆ ಸರ್ಕಾರಕ್ಕೆ ಕಾಳಜಿಯಿದೆ ಎಂದು ಅವರು ತಿಳಿಸಿದ್ದಾರೆ.

ಆರ್ಥಿಕ ಇಲಾಖೆಯೊಂದಿಗೆ ಚರ್ಚಿಸಿ, ವಿಧಾನಮಂಡಲದ ಅಧಿವೇಶನ ಮುಕ್ತಾಯದ ವೇಳೆಗೆ ಸಿಹಿ ಸುದ್ದಿ ನೀಡುವ ಪ್ರಯತ್ನ ಮಾಡುವುದಾಗಿ ಸಿಎಂ ಭರವಸೆ ನೀಡಿದ್ದಾರೆ. ಮತ್ತೊಮ್ಮೆ ಸಭೆ ನಡೆಸಿ ಅವರ ಬೇಡಿಕೆಗಳ ಕುರಿತು ಚರ್ಚಿಸಲಾಗುವುದು. ಆಶಾ ಕಾರ್ಯಕರ್ತೆಯರು ಸರ್ಕಾರದ ಮೇಲೆ ವಿಶ್ವಾಸವಿಟ್ಟು ಕರ್ತವ್ಯಕ್ಕೆ ಮರಳಬೇಕು. ಅವರ ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರ ಬದ್ಧವಾಗಿದೆ ಎಂದರು.

ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಎಲ್ಲರ ಹೊಣೆ: ಡಾ.ರಾಜಾರಾಮ್

ಕಲಬುರಗಿ, ನ. 27: ಕಲಬುರಗಿ ಎಂದರೆ ಕೇವಲ ಒಂದು ನಗರವಲ್ಲ. ಇಲ್ಲಿನ ಸ್ಮಾರಕಗಳು, ಪುರಾ ತತ್ವ ಸ್ಥಳಗಳು, ದೇವಾಲಯಗಳು, ಶಾಸನ ಗಳು ಮತ್ತು ಕೋಟೆಗಳು ನಮ್ಮ ನಾಡಿನ ಭವ್ಯ ಇತಿಹಾಸವನ್ನು ಸಾರುತ್ತವೆ. ಇಂತಹ ಅಮೂಲ್ಯ ಪರಂಪರೆಯನ್ನು ಗುರುತಿಸಿ ಸಂರಕ್ಷಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ಸರ್ಕಾರಿ ವಸ್ತುಸಂಗ್ರಹಾಲಯದ ಸಹಾಯಕ ನಿರ್ದೇಶಕ ಡಾ. ರಾಜಾರಾಮ್ ಬಿ.ಸಿ. ಹೇಳಿದರು.



ವಿಶ್ವ ಪರಂಪರೆ ಸಪ್ತಾಹದ ಅಂಗವಾಗಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ನಗರದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಇತಿಹಾಸ ವಿಭಾಗ, ಎನ್‌ಎಸ್‌ಎಸ್ ಘಟಕ ಹಾಗೂ ಇನ್‌ಟ್ಯಾಕ್ ಕಲಬುರಗಿ ಅಧ್ಯಾಯದ ಸಹಯೋಗದಲ್ಲಿ ಆಯೋಜಿಸಿದ್ದ "ಸ್ಥಳೀಯ ಇತಿಹಾಸ ಮತ್ತು ಪರಂಪರೆ" ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ,

ವಿಶೇಷ ಉಪನ್ಯಾಸ ನೀಡಿದ ಕಲಬುರಗಿ ವಿಭಾಗೀಯ ಪತ್ರಾಗಾರ ಇಲಾಖೆಯ ಉಪನಿರ್ದೇಶಕ ಡಾ. ವೀರಶೆಟ್ಟಿ ಗಾರಂಪಳ್ಳಿ ಅವರು, ಜಿಲ್ಲೆಯ ಪ್ರಮುಖ ಪಾರಂಪರಿಕ ತಾಣಗಳಾದ ನಾಗಾವಿ, ಮಳಖೇಡ, ಸನ್ನತಿ ಹಾಗೂ ಕಲಬುರಗಿಯ ಪ್ರಾಚೀನತೆ, ಸಾಂಸ್ಕೃತಿಕ ಹಿನ್ನೆಲೆ ಮತ್ತು ಪುರಾತತ್ವ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ಸಮಗ್ರ ಮಾಹಿತಿ ನೀಡಿದರು.

ಮುಖ್ಯ ಅತಿಥಿಯಾಗಿದ್ದ ವಿಶ್ರಾಂತ ಇತಿಹಾಸ ಪ್ರಾಧ್ಯಾಪಕ ಹಾಗೂ ಇನ್‌ಟ್ಯಾಕ್ ಸಹ ಸಂಯೋಜಕ ಡಾ. ಶಶಿಶೇಖರ್ ರೆಡ್ಡಿ ಮಾತನಾಡಿ, ಸ್ಮಾರಕಗಳು ನಮ್ಮ ಪೂರ್ವಜರ ಜೀವನಶೈಲಿ ಮತ್ತು ವಾಸ್ತುಶಿಲ್ಪವನ್ನು ಪರಿಚಯಿಸುತ್ತವೆ. ವಿದ್ಯಾರ್ಥಿಗಳು ಅವುಗಳಿಗೆ ಯಾವುದೇ ಹಾನಿಯಾಗದಂತೆ ಕಾಳಜಿ ವಹಿಸಬೇಕು ಎಂದು ಹೇಳಿದರು.

ಮಾದಕ ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಅಗತ್ಯ



ವಿಜಯಪುರ, ನ.26: ಮಾದಕ ವಸ್ತುಗಳ ಸೇವನೆಯು ವ್ಯಕ್ತಿಯ ಆರೋಗ್ಯದ ಜೊತೆಗೆ ಕುಟುಂಬ ಮತ್ತು ಸಮಾಜದ ಮೇಲೂ ಗಂಭೀರ ದುಷ್ಪರಿಣಾಮ ಬೀರುತ್ತದೆ. ಆದ್ದರಿಂದ, ಯುವಜನತೆ ಮಾದಕ ವಸ್ತುಗಳಿಂದ ದೂರವಿದ್ದು, ವ್ಯಸನಮುಕ್ತ ಜೀವನ ನಡೆಸುವ ಸಂಕಲ್ಪ ಮಾಡಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅರವಿಂದ ಹಾಗರಗಿ ಕರೆ ನೀಡಿದ್ದಾರೆ.

ನಗರದ ವಿಕಾಸ ಪ್ರೌಢಶಾಲೆಯಲ್ಲಿ ನ.25ರಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ವಿಕಾಸ ಪ್ರೌಢಶಾಲೆ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ನಶಾಮುಕ್ತ ಭಾರತ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಾದಕ ವಸ್ತುಗಳ ಸೇವನೆಯಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳು, ಯುವಜನತೆಯಲ್ಲಿ ಹೆಚ್ಚುತ್ತಿರುವ ಮಾದಕ ವಸ್ತುಗಳ ಬಳಕೆಯನ್ನು ತಡೆಗಟ್ಟುವ ಅಗತ್ಯ ಹಾಗೂ ಮಾದಕ ವಸ್ತುಗಳ ಮಾರಾಟ ಮತ್ತು ಬಳಕೆಯ ವಿರುದ್ಧ ಜಾಗೃತಿ ಮೂಡಿಸುವ ಮಹತ್ವವನ್ನು ವಿವರಿಸಿದರು. ಮಾದಕ ವ್ಯಸನವು ವ್ಯಕ್ತಿಯ ಜೀವನವನ್ನು ಹಾಳು ಮಾಡುವುದಲ್ಲದೆ, ಕುಟುಂಬದ ನೆಮ್ಮದಿ ಮತ್ತು ಸಾಮಾಜಿಕ ಸ್ವಾಸ್ಥ್ಯಕ್ಕೂ ಧಕ್ಕೆ ಉಂಟುಮಾಡುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಮಾದಕ ವಸ್ತುಗಳ ಆಕರ್ಷಣೆಗೆ ಒಳಗಾಗದೆ, ದುಶ್ಚಟಗಳಿಂದ ದೂರವಿದ್ದು, ಸುಂದರ ಜೀವನ ರೂಪಿಸಿಕೊಳ್ಳುವ ಮೂಲಕ ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

ಮಾದಕ ವ್ಯಸನಕ್ಕೆ ಒಳಗಾದವರನ್ನು ನಿರ್ಲಕ್ಷಿಸದೆ, ಅವರಿಗೆ ಸೂಕ್ತ ಸಮಾಲೋಚನೆ ಮತ್ತು ಪುನರ್ವಸತಿ ಸೌಲಭ್ಯ ಕಲ್ಪಿಸುವುದು ಅಗತ್ಯ. ವ್ಯಸನಮುಕ್ತ ಸಮಾಜ ನಿರ್ಮಾಣದಲ್ಲಿ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಹಾಗೂ ಸಾರ್ವಜನಿಕರು ಸಕ್ರಿಯವಾಗಿ ಕೈಜೋಡಿಸಬೇಕು ಎಂದು ತಿಳಿಸಿದರು.

ಮಿಂಚೇರಿ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ 11 ಕಾಡುಮೊಲಗಳ ಬೇಟೆ

ಮೂವರು ಆರೋಪಿಗಳ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ ದಾಖಲು

ಬಳ್ಳಾರಿ, ನ.27. ಬಳ್ಳಾರಿ ಪ್ರಾದೇಶಿಕ ಅರಣ್ಯ ವಲಯದ ವ್ಯಾಪ್ತಿಗೆ ಒಳಪಡುವ ಮಿಂಚೇರಿ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ (ಮಿಂಚೇರಿ ಗ್ರಾಮದ ಸರ್ವೆ ನಂಬರ್ 65ರ ಬಸಪ್ಪನ ಕೊಳ್ಳದ ಸಮೀಪ) ಗುರುವಾರ ಬೆಳಿಗಿನಜಾವೆ ಮೂವರು ವ್ಯಕ್ತಿಗಳು ಒಟ್ಟು 11 ಕಾಡು ಮೊಲಗಳನ್ನು ಬೇಟೆಯಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯು ಈ ಕೆಳಕಂಡ ಮೂವರು ಆರೋಪಿಗಳನ್ನೂ ವಶಕ್ಕೆ ಪಡೆದು ವನ್ಯಜೀವಿ ಸಂರಕ್ಷಣಾ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿದೆ:

ಆರೋಪಿಗಳನ್ನು ಮುಂದಿನ ನ್ಯಾಯಾಂಗ ತನಿಖೆಗಾಗಿ ಬಳ್ಳಾರಿಯ 3ನೇ ಹೆಚ್ಚುವರಿ ಪ್ರಥಮ ದರ್ಜೆ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿತ್ತು.



ಅರಣ್ಯ ಇಲಾಖೆಯ ಮನವಿ ಮತ್ತು ಎಚ್ಚರಿಕೆ:

ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆಯಲ್ಲಿ ಸಾರ್ವಜನಿಕರು ಇಲಾಖೆಯೊಂದಿಗೆ ಸಹಕರಿಸುವಂತೆ ಕೋರಲಾಗಿದೆ.

ಷಟ್‌ಸ್ಥಲ ಸಿದ್ಧಾಂತ ಆಧ್ಯಾತ್ಮದ ಮೇರು ಪರ್ವತ: ಡಾ.ಸಂತೋಷ್



ಬೀದರ್, ನ. 27: ಬಸವಾದಿ ಶರಣರ ಷಟ್‌ಸ್ಥಲ ಸಿದ್ಧಾಂತ ಆಧ್ಯಾತ್ಮ ಜಗತ್ತಿನ ಮೇರು ಪರ್ವತ ಎಂದು ನೌಬಾದ್‌ನ ಸರ್ಕಾರಿ ಕಾಲೇಜಿನ ಅತಿಥಿ ಉಪನ್ಯಾಸಕ ಡಾ. ಸಂತೋಷ ಹಂಗರಗಿ ಅಭಿಪ್ರಾಯ ಪಟ್ಟರು.

ಲಿಂಗಾಯತ ಮಹಾ ಮಠದ ವತಿಯಿಂದ ಇಲ್ಲಿಯ ಬಸವಗಿರಿಯಲ್ಲಿ ಆಯೋಜಿಸಿದ್ದ 281ನೇ ಮಾಸಿಕ ಶರಣ ಸಂಗಮ ಕಾರ್ಯಕ್ರಮದಲ್ಲಿ ಅನುಭಾವ ಮಂಡಿಸಿದ ಅವರು, ಹಂತ ಹಂತವಾಗಿ ಪರಮಾತ್ಮನಲ್ಲಿ ಬೆರೆಯುವ ಕ್ರಮವೇ ಷಟ್‌ಸ್ಥಲ ಸಿದ್ಧಾಂತ ಎಂದು ಹೇಳಿದರು.

ದೇವಶಕ್ತಿಯಲ್ಲಿ ವಿಶ್ವಾಸದಿಂದ ಭಕ್ತನಾಗಬೇಕು. ನಿಷ್ಠೆಯಿಂದ ಮಹೇಶ್ವರನಾಗಬೇಕು. ಸಾವಧಾನದಿಂದ ಪ್ರಸಾದಿ, ಸ್ವಾನುಭಾವದಿಂದ ಪ್ರಾಣಲಿಂಗಿಯಾಗಬೇಕು. ಅರಿವಿನಿಂದ ಶರಣನಾಗಿ ಐಕ್ಯ ಸ್ಥಳದತ್ತ ಸಾಗಬೇಕು. ಪರಮಾತ್ಮನನ್ನು ಸದಾ ಅನುಭವಿಸುತ್ತಿರಬೇಕು. ಹೊಟ್ಟೆಕಿಚ್ಚಿಗಾಗಿ ಬದುಕದೇ ಭಕ್ತಿಗಾಗಿ ಬದುಕಬೇಕು ಎಂದರು.

ಉದ್ಘಾಟನೆ ನೆರವೇರಿಸಿದ ಜಿಲ್ಲಾ ಕೈಗಾರಿಕಾ ಕೇಂದ್ರದ ಉಪ ನಿರ್ದೇಶಕ ರಾಜಕುಮಾರ ಪಾಟೀಲ ಮಾತನಾಡಿ, ಬಸವಾದಿ ಶರಣರ ವಚನ ಸಂದೇಶ ಸಾರಲು ಜನ್ಮ ತಳೆದವರು ಅಕ್ಕ ಅನ್ನಪೂರ್ಣತಾಯಿ. ಪ್ರವಚನಗಳ ಮೂಲಕ ನಾಡಿನಾದ್ಯಂತ ಬಸವ ಸಂದೇಶ ಸಾರಿದರು ಎಂದು ತಿಳಿಸಿದರು.

ವಾರದ ಅನುಭವ ಮಂಟಪ, ಮಾಸಿಕ ಶರಣ ಸಂಗಮ, ಗುರುವಚನ ಪರುಷ ಕಟ್ಟೆ, ಲಿಂಗಾಯತ ಧರ್ಮ ಗ್ರಂಥ, ಮರಣವೇ ಮಹಾನವಮಿ ಉತ್ಸವ, ವಚನ ವಿಜಯೋತ್ಸವ ಅವರ ಕೊಡುಗೆಗಳಾಗಿವೆ. ಅಕ್ಕನವರ ಋಣ ತೀರಿಸಲು ಅವರು ತೋರಿದ ಮಾರ್ಗದಲ್ಲಿ ನಡೆಯಬೇಕು ಎಂದರು.

ಸಾನಿಧ್ಯ ವಹಿಸಿದ್ದ ಪರುಷ ಕಟ್ಟೆಯ ಚನ್ನಬಸವಣ್ಣ ಮಾತನಾಡಿ, ಬಸವಾದಿ ಶರಣರು ಸೂರ್ಯನಂತೆ ಲೋಕಕ್ಕೆ ಸದಾ ಬೆಳಕು ನೀಡುವವರು. ಸೂರ್ಯನಿಗೆ ಮಸಿ ಬಳಿಯಲು ಯಾರಿಂದಲೂ ಸಾಧ್ಯವಿಲ್ಲ. ಹಾಗೆಯೇ ಶರಣರ ಪ್ರಖಿರತೆ ನಂದಿಸಲು ಆಗುವುದಿಲ್ಲ. ಶರಣರು ಮೆಚ್ಚುವಂತೆ ಬದುಕಿದರೆ ಮಾತ್ರ ಅವರ ಕೃಪೆ ಸಾಧ್ಯ ಎಂದು ತಿಳಿಸಿದರು.

ಸಂತೆಗೆ ಬಂದವರೆಲ್ಲ ಬೆಲ್ಲದ ವ್ಯಾಪಾರಿಗಳಲ್ಲ. ಅದರಂತೆ ಭೂಮಿಗೆ ಬಂದ ನರ ಮನುಜರೆಲ್ಲ ಭಕ್ತರಲ್ಲ. ಇವರಿಗೆ ದೇವರು ಕೊಡುವ ವಸ್ತುಗಳು ಬೇಕೇ ವಿನಃ ದೇ

ಬದಲಾಗುವ ತಾಂತ್ರಿಕ ಪರಿಸರಕ್ಕೆ ತಕ್ಕಂತೆ ಪ್ರಾಧ್ಯಾಪಕರು ಜ್ಞಾನ ಕೌಶಲ ನವೀಕರಿಸಬೇಕು: ಪ್ರೊ.ಸತ್ಯನಾರಾಯಣ ಕರೆ

ಕಲಬುರಗಿ, ನ. 27: ತ್ವರಿತಗತಿಯಲ್ಲಿ ತಾಂತ್ರಿಕ ಪ್ರಗತಿ ಮತ್ತು ಬದಲಾಗುತ್ತಿರುವ ಶೈಕ್ಷಣಿಕ ಪರಿಸರಕ್ಕೆ ಅನುಗುಣವಾಗಿ ಪ್ರಾಧ್ಯಾಪಕರು ತಮ್ಮ ಜ್ಞಾನ ಹಾಗೂ ಕೌಶಲ ನಿರಂತರ ನವೀಕರಿಸಿಕೊಳ್ಳಬೇಕು ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಸಲಹೆ ನೀಡಿದರು.



ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ಆರ್ಥಿಕ ಅಧ್ಯಯನ ಮತ್ತು ಯೋಜನಾ ವಿಭಾಗವು ಹೈದರಾಬಾದ್‌ನ ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಮಂಡಳಿ ದಕ್ಷಿಣ ಪ್ರಾದೇಶಿಕ ಕೇಂದ್ರದ ಸಹಯೋಗದೊಂದಿಗೆ ಆಯೋಜಿಸಿದ್ದ ಟೈಮ್ ಸಿರೀಸ್ ಮತ್ತು ಪ್ಯಾನಲ್ ಡೇಟಾ ವಿಶ್ಲೇಷಣೆ ಕುರಿತ ಮೂರು ದಿನಗಳ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮದ ಸಮಾರೋಪದಲ್ಲಿ ಮಾತನಾಡಿ, ಶಿಕ್ಷಕರು ಸದಾ ಕಲಿಯುವ ಮನೋಭಾವ ಬೆಳೆಸಿಕೊಳ್ಳಬೇಕು. ಬದಲಾಗುತ್ತಿರುವ ಕಾಲಟ್ಟದಲ್ಲಿ ಹೆಚ್ಚುತ್ತಿರುವ ಸ್ಪರ್ಧೆ ಎದುರಿಸಲು ಹೊಸ ಜ್ಞಾನ ಸಂಪಾದಿಸುವುದು ಮತ್ತು ಕೌಶಲ ಅಭಿವೃದ್ಧಿಪಡಿಸಿಕೊಳ್ಳುವುದು ಅತ್ಯಗತ್ಯ ಎಂದು ಹೇಳಿದರು. ಆರ್ಥಿಕ ನೀತಿಗಳು ಕೇವಲ ಸೈದ್ಧಾಂತಿಕ ಚಿಂತನೆಗಳಿಗೆ ಸೀಮಿತವಾಗದೆ, ಕಚೇರಿಗಳಲ್ಲಿ ಕುಳಿತು ರೂಪಿಸುವುದಕ್ಕಿಂತ ಜನರ ನೈಜ ಅಗತ್ಯ, ಸಮಸ್ಯೆ ಮತ್ತು ಸ್ಥಳಿಯ ಪರಿಸ್ಥಿತಿ ಆಧರಿಸಿರಬೇಕು. ಆರ್ಥಿಕ ನೀತಿ ರೂಪಿಸುವ ಮೊದಲು ನೀತಿ ನಿರೂಪಕರು ಮತ್ತು ಸಂಶೋಧಕರು ಗ್ರಾಮೀಣ ಹಾಗೂ ನಗರ ಪ್ರದೇಶಗಳಿಗೆ ಭೇಟಿ ನೀಡಿ, ಸ್ಥಳಿಯ ಜನರೊಂದಿಗೆ ಸಂವಾದ ನಡೆಸುವ ಮೂಲಕ ಅವರ ಸಮಸ್ಯೆ ಮತ್ತು ಅಗತ್ಯ ಅರಿತುಕೊಳ್ಳಬೇಕು. ಸ್ಥಳಿಯ ಪರಿಸ್ಥಿತಿಗೆ ಅನುಗುಣವಾದ ನೀತಿ ರೂಪಿಸಿದಾಗ ಮಾತ್ರ ಅವು ಸಮಾಜಕ್ಕೆ ಪರಿಣಾಮಕಾರಿಯಾಗಿ ಪ್ರಯೋಜನ ನೀಡಲು ಸಾಧ್ಯ ಎಂದು ಹೇಳಿದರು.

ವಾಣಿಜ್ಯ ಅಧ್ಯಯನ ನಿಕಾಯದ ಡೀನ್ ಪ್ರೊ.ಪಾಂಡುರಂಗ ಪತ್ತಿ ಮಾತನಾಡಿ, ಈ ಕಾರ್ಯಕ್ರಮವು ಅಧ್ಯಾಪಕರ ವಿಶ್ಲೇಷಣಾತ್ಮಕ ಸಾಮರ್ಥ್ಯ ಮತ್ತು ಸಂಶೋಧನಾ ಕೌಶಲ ಹೆಚ್ಚಿಸುವುದರ ಜತೆಗೆ ಅವರ ಶೈಕ್ಷಣಿಕ ಹಾಗೂ ವೃತ್ತಿಪರ ಬೆಳವಣಿಗೆಗೆ ಪೂರಕ ಎಂದರು.

ಸಂಶೋಧನೆ ಮತ್ತು ನಾವೀನ್ಯತೆಗೆ ಆದ್ಯತೆ ನೀಡುವ ಮೂಲಕ ಪರಿಣಾಮಕಾರಿ ಅಭಿವೃದ್ಧಿ ಕಾರ್ಯತಂತ್ರ ರೂಪಿಸುವಲ್ಲಿ ವಿಶ್ವವಿದ್ಯಾಲಯಗಳು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಪ್ರಮುಖ ಪಾತ್ರ ವಹಿಸಬೇಕು. ಅಧ್ಯಾಪಕರು ನಿರಂತರ ಕಲಿಕೆ, ಜ್ಞಾನ ವಿನಿಮಯ ಹಾಗೂ ಹೊಸ ವಿಧಾನಗಳ ಅಳವಡಿಕೆಗೆ ಒತ್ತು ನೀಡಿ ತಮ್ಮ ಶೈಕ್ಷಣಿಕ ಮತ್ತು ಸಂಶೋಧನಾ ಸಾಮರ್ಥ್ಯ ಮತ್ತಷ್ಟೂ ಹೆಚ್ಚಿಸಿಕೊಳ್ಳಬೇಕು.
– ಪ್ರೊ.ಬಟ್ಟು ಸತ್ಯನಾರಾಯಣ, ಕುಲಪತಿ.

ಸಂವಿಧಾನವು ಸಮಾನತೆ, ಭ್ರಾತೃತ್ವದ ಸಂಕೇತ: ವಿಠಲ ಕಟಕಧೊಂಡ

ವಿಜಯಪುರ, ನ.26: ಭಾರತೀಯ ಸಂವಿಧಾನವು ದೇಶಪ್ರೇಮ, ಲಿಂಗಭೇದವಿಲ್ಲದ ಸಮಾನತೆ,ಸ್ವಾತಂತ್ರ್ಯ ಹಾಗೂ ಭ್ರಾತೃತ್ವದ ಮೌಲ್ಯಗಳನ್ನು ಒಳಗೊಂಡಿರುವ ವಿಶಿಷ್ಟ ದಾಖಲೆ ಯಾಗಿದ್ದು, ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯ ಭದ್ರ ತಳಹದಿಯಾಗಿದೆ. ಸಂವಿಧಾನದ ಮೂಲಕ ಪ್ರತಿಯೊಬ್ಬ ನಾಗರಿಕರಿಗೂ ಸಮಾನ ಹಕ್ಕು ಮತ್ತು ಗೌರವಯುತ ಬದುಕಿನ ಅವಕಾಶ ಕಲ್ಪಿಸಿದ ಡಾ.ಬಿ.ಆರ್. ಅಂಬೇಡ್ಕರ್ ಅವರ ಕೊಡುಗೆ ಅನನ್ಯವಾಗಿದೆ ಎಂದು ಶಾಸಕ ವಿಠಲ ಕಟಕಧೊಂಡ ಹೇಳಿದರು.

ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು. ಗೌತಮ ಬುದ್ಧರು,12ನೇ ಶತಮಾನದಲ್ಲಿ ಬಸವಣ್ಣನವರು ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರು ತಮ್ಮ ಕಾಲಘಟ್ಟದಲ್ಲಿ ಸಮಾಜಕ್ಕೆ ನೀಡಿದ ಸಮಾನತೆ, ಮಾನವೀಯತೆ ಮತ್ತು ಸಾಮಾಜಿಕ ನ್ಯಾಯದ ಸಂದೇಶಗಳು ಇಂದಿಗೂ ಪ್ರಸ್ತುತವಾಗಿವೆ.

ದೇಶದಲ್ಲಿ ಹೆಚ್ಚು ಸಂಸ್ಥಾನಗಳಿದ್ದವು. ವಿವಿಧ ಭಾಷೆ, ಸಂಸ್ಕೃತಿ ಮತ್ತು ಪ್ರಾದೇಶಿಕ ವೈವಿಧ್ಯತೆಗಳನ್ನು ಹೊಂದಿದ್ದ ವಿಶಾಲ ದೇಶವನ್ನು ಒಗ್ಗೂಡಿಸಿ, ಎಲ್ಲರನ್ನೂ ಒಂದೇ ಸಂವಿಧಾನದ ಚೌಕಟ್ಟಿನಡಿ ತರುವಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೊಡುಗೆ ಮಹತ್ವದ್ದಾಗಿದೆ. ದೇಶದ ವಿವಿಧ ಭಾಷೆ, ಸಂಸ್ಕೃತಿ ಮತ್ತು ಎಲ್ಲರನ್ನು ಒಗ್ಗೂಡಿಸುವ ಪ್ರಜಾಸತ್ತಾತ್ಮಕ ಆಶಯ ಹಾಗೂ ಸಮಾನತೆಯ ಮೌಲ್ಯಗಳನ್ನು ಸಂವಿಧಾನದಲ್ಲಿ ಅಳವಡಿಸಿರುವುದು ಅದರ ಪ್ರಮುಖ ವಿಶೇಷತೆಯಾಗಿದೆ ಎಂದು ತಮ್ಮ ಉಪನ್ಯಾಸದಲ್ಲಿ ವಿವರಿಸಿದರು.

ಸಂವಿಧಾನ ದಿನಾಚರಣೆ, ದಲಿತ ನಾಯಕತ್ವ: ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರತಾಪ್‌ಸಿಂಹ ವಾಗ್ದಾಳಿ

ಮೈಸೂರು, ನ.27: ಸಂವಿಧಾನ ದಿನಾಚರಣೆ ಮತ್ತು ದಲಿತರಿಗೆ ನಾಯಕತ್ವ ವಿಚಾರಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಮಾಜಿ ಸಂಸದ ಪ್ರತಾಪ್ ಸಿಂಹ ಅವರು ಶುಕ್ರವಾರ ತೀವ್ರ ವಾಗ್ದಾಳಿ ನಡೆಸಿದ್ದಾರೆ.



ನಗರದಲ್ಲಿ ಮಾಧ್ಯಮಗಳೊಂದಿಗೆ ಶುಕ್ರವಾರ ಮಾತನಾಡಿದ ಅವರು, ಸಿದ್ದರಾಮಯ್ಯನವರೇ 'ಈಗಿನ ಸಂವಿಧಾನ, ಸಂವಿಧಾನದ ಪೀಠಿಕೆ ಅಂಬೇಡ್ಕರ್ ಬರೆದಿದ್ದಲ್ಲ. ನಮ್ಮ ಕೈಯಲ್ಲಿರೋದು ಇಂದಿರಾ ಗಾಂಧಿ ಬದಲಾಯಿಸಿದ ಸಂವಿಧಾನ ಪೀಠಿಕೆ ಎಂದರು. ಇವತ್ತು ನಮ್ಮ ಕೈಯಲ್ಲಿರೋ ಸಂವಿಧಾನ ಅಂಬೇಡ್ಕರ್ ಸಂವಿಧಾನವಾಗಿಯೇ ಉಳಿದಿದೆಯೇ? ಈಗಿನ ಸಂವಿಧಾನ ಪೀಠಿಕೆ ಅಂಬೇಡ್ಕರ್ ಬರೆದಿದ್ದಾ ಎಂದು ಪ್ರತಾಪ್ ಸಿಂಹ ಪ್ರಶ್ನಿಸಿದರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಸಿದ್ದರಾಮಯ್ಯ ಮತ್ತು ಮಾಜಿ ಸಚಿವ ಎಚ್.ಸಿ. ಮಹಾದೇವಪ್ಪ ಅವರ ಉಪಸ್ಥಿತಿಯಲ್ಲಿ ನಡೆದ ಸಂವಿಧಾನ ದಿನಾಚರಣೆಯ ಹಿನ್ನೆಲೆಯಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ ಅವರು ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿ ಹಲವು ಪ್ರಶ್ನೆಗಳನ್ನು ಮುಂದಿಟ್ಟಿದ್ದಾರೆ.

ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಭಾರತರತ್ನ ಏಕೆ ನೀಡಲಿಲ್ಲ, ಅಂಬೇಡ್ಕರ್ ಅಂತ್ಯಸಂಸ್ಕಾರಕ್ಕೆ ಜಾಗ ಏಕೆ ನೀಡಲಿಲ್ಲ, ಸಂವಿಧಾನ ದಿನಾಚರಣೆ ನೀವೇಕೆ ಆಂಭಿಸಲಿಲ್ಲ, ಆದರೆ 2015ರಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನವೆಂಬರ್ 26ರಂದು ಸಂವಿಧಾನ ದಿನಾಚರಣೆ ಆರಂಭಿಸಲಾಯಿತು. ಈಗ ಹೇಳಿ ದಲಿತ ವಿರೋಧಿಗಳು ಕಾಂಗ್ರೆಸ್ಸಿಗರ ಅಥವಾ ಬಿಜೆಪಿನಾ ಎಂದು ಪ್ರಶ್ನಿಸಿದ್ದಾರೆ.

ಯುವಜನರು ಸತ್ಯದ ಹಾದಿಯಲ್ಲಿ ನಡೆಯಲಿ: ಬಿ.ವೈ. ವಿಜಯೇಂದ್ರ ಕಿವಿಮಾತು



ಚಿಕ್ಕಬಳ್ಳಾಪುರ, ನ.26– ಸುಳ್ಳು ವೇಗವಾಗಿ ಹರಡುತ್ತಿರುವ ಈ ಕಾಲದಲ್ಲಿ ಯುವಜನರು ಸತ್ಯ ನುಡಿಯಲು ಧೈರ್ಯ ತೋರಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಮಡಿಯಾಲ ನಾರಾಯಣ ಭಟ್ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಮುದ್ದೇನಹಳ್ಳಿಯ ಸತ್ಯ ಸಾಯಿ ಗ್ರಾಮದಲ್ಲಿ ಶುಕ್ರವಾರ ಸಂಜೆ ಆಯೋಜಿಸಿದ್ದ ವರ್ಲ್ಡ್ ಯೂತ್ ಮೀಟ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

"ಕಳೆದ ಕೆಲವು ವರ್ಷಗಳಿಂದ ಸದ್ಗುರು ಮಧುಸೂದನ ಸಾಯಿ ಅವರ ಸಂಪರ್ಕದಲ್ಲಿದ್ದೇನೆ. ಅವರ ಆಧ್ಯಾತ್ಮಿಕ ಚಿಂತನೆ ಕರುಣೆಯ ರೂಪದಲ್ಲಿ ಸೇವಾ ಕಾರ್ಯಗಳ ಮೂಲಕ ವ್ಯಕ್ತವಾಗುತ್ತಿದೆ. ಉಚಿತ ಶಿಕ್ಷಣ, ಮಕ್ಕಳಿಗೆ ಸಾಯಿ ಶ್ಯೂರ್ ಉಪಾಹಾರ ಹಾಗೂ ಉಚಿತ ವೈದ್ಯಕೀಯ ಸೇವೆ ಇದಕ್ಕೆ ಸಾಕ್ಷಿ" ಎಂದರು.

ಪಶ್ಚಿಮ ಬಂಗಾಳದ ಸಚಿವ ಅಶೋಕ್ ಕುಮಾರ್ ದಿಂಡಾ ಮಾತನಾಡಿ, "ಇಲ್ಲಿಗೆ ಬರುತ್ತಿರುವುದು ಇದು ಮೂರನೇ ಬಾರಿ. ಇಲ್ಲಿನ ಆಸ್ಪತ್ರೆ ಸೆವೆನ್ ಸ್ಟಾರ್ ಆಸ್ಪತ್ರೆಯಂತಿದೆ. ಇಂತಹ ವ್ಯವಸ್ಥೆಯನ್ನು ಬೇರೆಲ್ಲೂ ನೋಡಿಲ್ಲ" ಎಂದು ಶ್ಲಾಘಿಸಿದರು.

ಬಿ.ವೈ. ವಿಜಯೇಂದ್ರ ಮತ್ತು ಅಶೋಕ್ ಕುಮಾರ್ ದಿಂಡಾ ಅವರನ್ನು ಸನ್ಮಾನಿಸಲಾಯಿತು.

ಗುಜರಾತ್‌ನ ಪೋರ್‌ಬಂದರ್‌ನ ಸಾಂದೀಪನಿ ವಿದ್ಯಾನಿಕೇತನದ ಸ್ಥಾಪಕ ಭೈಶ್ರೀ ರಮೇಶ್‌ಭಾಯಿ ಓಝಾ ವಿಡಿಯೊ ಸಂದೇಶದ ಮೂಲಕ ಶುಭ ಹಾರೈಸಿದರು. ಪ್ರಶಾಂತಿ ಬಾಲಮಂದಿರ ಟ್ರಸ್ಟ್‌ನ ಅಧ್ಯಕ್ಷ ಡಾ. ಬಿ.ಎನ್. ನರಸಿಂಹ ಮೂರ್ತಿ ಉಪಸ್ಥಿತರಿದ್ದರು.

ನಂತರ, ಆಶೀರ್ವಚನ ನೀಡಿದ ಒನ್ ವರ್ಲ್ಡ್ ಒನ್ ಫ್ಯಾಮಿಲಿ ಮಿಷನ್ ಸಂಸ್ಥಾಪಕ ಸದ್ಗುರು ಶ್ರೀ ಮಧುಸೂದನ ಸಾಯಿ ಅವರು ಕರ್ನಾಟಕದ ಹಿರಿಮೆಯನ್ನು ಸ್ಮರಿಸಿ, 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಎಂದು ಹೇಳಿದರು. 'ಒನ್ ವರ್ಲ್ಡ್ ಒನ್ ಫ್ಯಾಮಿಲಿ' ಪರಿಕಲ್ಪನೆಯ ಆಶಯವನ್ನು ವಿವರಿಸಿದ ಅವರು, ಚಿಕಾಗೊ ಭಾಷಣದಲ್ಲಿ ಸ್ವಾಮಿ ವಿವೇಕಾನಂದರು ಸಾರಿದ ವಿಶ್ವಮಾನವತೆಯ ಸಂದೇಶ, ಬಸವಣ್ಣನವರ 'ಇವ ನಮ್ಮವ' ಎಂಬ ವಚನ ಹಾಗೂ ರವೀಂದ್ರನಾಥ ಟ್ಯಾಗೋರರ ಶಾಂತಿನಿಕೇತನದ ಆಶಯಗಳನ್ನು ಸ್ಮರಿಸಿದರು. ಬಳಿಕ ನಾದ ಗುರುಕುಲಂನ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು 'ತ್ರಿವೇಣಿ' ಶೀರ್ಷಿಕೆಯಡಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದರು.

ಅಪೊಲೊ-ಎಸ್‌ಎಸ್‌ಎಸ್‌ಯುಎಚ್‌ಇ ನಡುವೆ ಒಡಂಬಡಿಕೆ

ಅಪೊಲೊ ಹಾಸ್ಪಿಟಲ್ಸ್ ಎಜುಕೇಷನಲ್ ಆಯಂಡ್ ರಿಸರ್ಚ್ ಫೌಂಡೇಷನ್ (ಎಎಚ್‌ಇಆರ್‌ಎಫ್) ಹಾಗೂ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ (ಎಸ್‌ಎಸ್‌ಎಸ್‌ಯುಎಚ್‌ಇ) ನಡುವೆ ಒಡಂಬಡಿಕೆ ನಡೆಯಿತು. ಅಪೋಲೋ ಪರವಾಗಿ ಮುಖ್ಯ ವೈಜ್ಞಾನಿಕ ಅಧಿಕಾರಿ ಡಾ. ಎಂ.ವಿ. ಶಶಿಧರ್ ಹಾಗೂ ವಿಶ್ವವಿದ್ಯಾಲಯದ ಪರವಾಗಿ ಆಡಳಿತ ವಿಭಾಗದ ರಿಜಿಸ್ಟ್ರಾರ್ ಡಾ. ಹನುಮಂತರಾವ್ ನಾಯ್ಡು ಒಪ್ಪಂದದ ವಿನಿಮಯ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಗ್ರಾಹಕರಿಗೆ ತ್ವರಿತ ನ್ಯಾಯ ಒದಗಿಸಲು ಮಧ್ಯಸ್ಥಿಕೆ ಸಹಕಾರಿ: ನ್ಯಾ. ಅಶೋಕ ಕಿಣಗಿ

ಕಲಬುರಗಿ, ನ. 27: ಗ್ರಾಹಕರಿಗೆ ತ್ವರಿತ ಹಾಗೂ ಸುಲಭವಾಗಿ ನ್ಯಾಯ ದೊರಕಿಸಿಕೊಡುವ ಉದ್ದೇಶದಿಂದ ಗ್ರಾಹಕ ಹಾಗೂ ವ್ಯಾಪಾರಿಗಳ ನಡುವಿನ ವಿವಾದಗಳನ್ನು ನ್ಯಾಯಾಲಯಗಳಿಗೆ ಅಲೆಯದೆ, ಮಾತುಕತೆ ಮೂಲಕ ಬಗೆಹರಿಸಿ ಕೊಳ್ಳಲು ಮಧ್ಯಸ್ಥಿಕೆ ಕೇಂದ್ರ ಸಹಕಾರಿ ಯಾಗಲಿದೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯ ಮೂರ್ತಿ ಅಶೋಕ ಎಸ್. ಕಿಣಗಿ ಹೇಳಿದರು.

2019ರ ಅಡಿಯಲ್ಲಿ ಸ್ಥಾಪಿಸಲಾದ ಈ ಕೇಂದ್ರದಲ್ಲಿ ತರಬೇತಿ ಪಡೆದ ಮಧ್ಯಸ್ಥಗಾರರು ಗೌಪ್ಯತೆ ಕಾಪಾಡಿಕೊಂಡು, ನಿಷ್ಪಕ್ಷಪಾತವಾಗಿ ಮಾತುಕತೆಯ ಮೂಲಕ ವಿವಾದಗಳನ್ನು ಬಗೆಹರಿಸಲು ನೆರವಾಗಲಿದ್ದಾರೆ. ಇದಯಿಂದ ನ್ಯಾಯಾಲಯದ ಅಲೆದಾಟ ಕಡಿಮೆಯಾಗುವುದರ ಜತೆಗೆ ಸಮಯ ಮತ್ತು ಹಣ ಉಳಿತಾಯವಾಗಲಿದೆ. ಗ್ರಾಹಕರು, ವ್ಯಾಪಾರಸ್ಥರು ಹಾಗೂ ವಕೀಲರಿಗೂ ಇದರಿಂದ ಅನುಕೂಲವಾಗಲಿದೆ.



ಈ ಮಧ್ಯಸ್ಥಿಕೆ ಕೇಂದ್ರವು ಮಾತುಕತೆ, ಪರಸ್ಪರ ತಿಳುವಳಿಕೆ ಮತ್ತು ರಾಜಿ ಸಂಧಾನದ ಮೂಲಕ ವಿವಾದಗಳನ್ನು ಬಗೆಹರಿಸಲು ನೆರವಾಗಲಿದೆ. ಇದರಿಂದ ದೀರ್ಘ ಕಾಲದ ನ್ಯಾಯಾಲಯದ ಪ್ರಕ್ರಿಯೆ ಹಾಗೂ ಅಲೆದಾಟದ ಹೊರೆ ಕಡಿಮೆಯಾಗಲಿದೆ. ಸಮಯ ಮತ್ತು ಹಣ ಉಳಿತಾಯವಾಗುವುದರ ಜತೆಗೆ ಗ್ರಾಹಕರು ಹಾಗೂ ವ್ಯಾಪಾರಸ್ಥರು ಇಬ್ಬರಿಗೂ ಅನುಕೂಲವಾಗುವ ಪ್ರಾಯೋಗಿಕ ಪರಿಹಾರ ದೊರೆಯಲಿದೆ ಎಂದರು.

ಮಧ್ಯಸ್ಥಿಕೆ ಎಂದರೆ ನ್ಯಾಯದಲ್ಲಿ ರಾಜಿ ಮಾಡಿಕೊಳ್ಳುವುದಲ್ಲ. ಪ್ರಕರಣವೊಂದನ್ನು ಮಧ್ಯಸ್ಥಿಕೆಗೆ ಕಳುಹಿಸಿದರೆ ಅದನ್ನು ಸೋಲು ಎಂಬ ಭಾವನೆಯಿಂದ ನೋಡುವುದು ಸರಿಯಲ್ಲ. ಬದಲಾಗಿ, ಮಧ್ಯಸ್ಥಿಕೆಯು ಪರಸ್ಪರ ಸಂಬಂಧಗಳನ್ನು ಉಳಿಸಿಕೊಂಡು ವಿವಾದಗಳನ್ನು ಬಗೆಹರಿಸಿಕೊಳ್ಳುವ ಉತ್ತಮ ಮಾರ್ಗವಾಗಿದೆ. ಇದರಲ್ಲಿ ಮೂರನೇ ವ್ಯಕ್ತಿಯಾಗಿ ಮಧ್ಯಸ್ಥಗಾರರು ಕಾರ್ಯನಿರ್ವಹಿಸುತ್ತಾರೆ. ಅವರು ಯಾವುದೇ ಪಕ್ಷಪಾತವಿಲ್ಲದೆ ಉಭಯ ಪಕ್ಷಗಳ ಸಮಸ್ಯೆಗಳನ್ನು ಆಲಿಸಿ, ಪರಸ್ಪರ ಮನವರಿಕೆ ಮಾಡಿಕೊಡುವ ಮೂಲಕ ವಿವಾದ ಇತ್ಯರ್ಥಕ್ಕೆ ನೆರವಾಗುತ್ತಾರೆ ಎಂದು ತಿಳಿಸಿದರು.

ಗ್ರಾಹಕ ಸಂರಕ್ಷಣಾ ಕಾಯ್ದೆ– ಹಿಂದೆ ಈ ಭಾಗದ ಜನರು ರಾಜ್ಯ ಗ್ರಾಹಕರ ಆಯೋಗದ ಕಾರ್ಯಗಳಿಗೆ ಸಂಬಂಧಿಸಿದಂತೆ ಬೆಂಗಳೂರಿಗೆ ತೆರಳಬೇಕಾಗಿತ್ತು. ಇದೀಗ ಕಲಬುರಗಿಯಲ್ಲಿಯೇ ಮಧ್ಯಸ್ಥಿಕೆ ಕೇಂದ್ರ ಆರಂಭಿಸಿರುವುದು ಗ್ರಾಹಕರಿಗೆ ಸುಲಭವಾಗಿ ಮತ್ತು ತ್ವರಿತವಾಗಿ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಬೆಂಗಳೂರಿನ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಟಿ.ಜಿ. ಶಿವಶಂಕರೇಗೌಡ ಅವರು, ನ್ಯಾಯಮೂರ್ತಿ ಅಶೋಕ ಎಸ್. ಕಿಣಗಿ ಅವರಿಂದ ನೂತನ ಕಟ್ಟಡ ಉದ್ಘಾಟನೆಗೊಂಡಿರುವುದು ಸಂತಸದ ಸಂಗತಿಯಾಗಿದೆ. ಕಳೆದ ಒಂದೂವರೆ ವರ್ಷದಲ್ಲಿ 12,000ಕ್ಕೂ ಅಧಿಕ ಪ್ರಕರಣಗಳ ಪೈಕಿ ಸುಮಾರು 4,000 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ತಿಳಿಸಿದರು.

ಈಗಾಗಲೇ 10 ಮಂದಿ ಮಧ್ಯಸ್ಥಗಾರರನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಲಾಗಿದೆ. ಅವರಿಗೆ ಶೀಘ್ರದಲ್ಲಿಯೇ ಅಗತ್ಯ ತರಬೇತಿ ನೀಡಲಾಗುವುದು ಎಂದು ಹೇಳಿದರು.

ಮಂಗಳೂರು ವಿಮಾನ ನಿಲ್ದಾಣದಲ್ಲಿ ಅಣಕು ಕಾರ್ಯಾಚರಣೆ

ಮಂಗಳೂರು, ನ.27: ಮಂಗಳೂರಿನಿಂದ ಮುಂಬೈಗೆ ತೆರಳುತ್ತಿದ್ದ ವಿಮಾನವೊಂದು ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹೊರಭಾಗದಲ್ಲಿ ಅಪಘಾತಕ್ಕೀಡಾಗಿದೆ ಎಂಬ ಕಾಲ್ಪನಿಕ ಸನ್ನಿವೇಶವನ್ನು ಸೃಷ್ಟಿಸಿ, ವಿಮಾನ ನಿಲ್ದಾಣದಲ್ಲಿ ಸಮಗ್ರ ಅಣಕು ಕಾರ್ಯಾಚರಣೆ ನಡೆಸಲಾಯಿತು.ಈ ಸಂದರ್ಭದಲ್ಲಿ ಪ್ರಯಾಣಿಕರ ರಕ್ಷಣೆ, ಸ್ಥಳಾಂತರ ಹಾಗೂ ತುರ್ತು ವೈದ್ಯಕೀಯ ನೆರವಿನ ಕುರಿತು ಅಣಕು ಕಾರ್ಯಾಚರಣೆ ನಡೆಸಲಾಯಿತು.ಈ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದ ವಿಮಾನ ನಿಲ್ದಾಣದ ಕಾರ್ಯಾಚರಣೆ ಬಳಗ್ಗೆ 11:20ಕ್ಕೆ ಪುನರಾರಂಭಗೊಂಡಿತು. ಯಾವುದೇ ನೈಜ ವಿಮಾನ ಅಪಘಾತ ಸಂಭವಿಸಿಲ್ಲ. ಇದು ತುರ್ತು ಪರಿಸ್ಥಿತಿ ನಿರ್ವಹಣೆಯ ಸಿದ್ಧತೆ ಪರಿಶೀಲಿಸಲು ನಡೆಸಿದ ಅಣಕು ಕಾರ್ಯಾಚರಣೆಯ ದೃಶ್ಯವಾಗಿದೆ.



ಔಷಧಕಾರರ ವೃತ್ತಿಪರ ಅಭಿವೃದ್ಧಿಗೆ ಸೌಲಭ್ಯ: ಡಾ.ಶಿರಸೆ



ರಾಯಚೂರು, ನ. 27: ಔಷಧಕಾರರ ವೃತ್ತಿಪರ ಅಭಿವೃದ್ಧಿ ಹಾಗೂ ಕುಟುಂಬಗಳ ಆರ್ಥಿಕ ಕಲ್ಯಾಣಕ್ಕೆ ಕರ್ನಾಟಕ ರಾಜ್ಯ ಔಷಧ ವಿಜ್ಞಾನ ಪರಿಷತ್ತು ಹಲವು ಸೌಲಭ್ಯ ಮತ್ತು ನೆರವು ಯೋಜನೆಗಳನ್ನು ಜಾರಿಗೊಳಿಸಿದೆ ಎಂದು ಪರಿಷತ್ತಿನ ಕುಲಸಚಿವ ಡಾ. ಶಿರಸೆ ಕ್ರಾಂತಿಕುಮಾರ ಹೇಳಿದರು.

ಪರಿಷತ್ತಿನಲ್ಲಿ ನೋಂದಾಯಿತ ಔಷಧಕಾರರ ಕುಟುಂಬಗಳ ಆರ್ಥಿಕ ಕಲ್ಯಾಣಕ್ಕಾಗಿ ಅರ್ಹ ಕುಟುಂಬಗಳಿಗೆ ಆರ್ಥಿಕ ನೆರವು ನೀಡಲಾಗುತ್ತಿದೆ. ಫಾರ್ಮಸಿ ಶಿಕ್ಷಕರು ಮತ್ತು ಔಷಧಕಾರರಿಗೆ ಸಂಶೋಧನೆ ಹಾಗೂ ಸಮ್ಮೇಳನಗಳಲ್ಲಿ ಭಾಗವಹಿಸಲು ಪ್ರಯಾಣ ಮತ್ತು ಸಂಶೋಧನಾ ಅನುದಾನ ಒದಗಿಸಲಾಗುತ್ತಿದೆ. ಸಮ್ಮೇಳನ, ಕಾರ್ಯಾಗಾರಗಳಿಗೆ ಪ್ರಾಯೋಜಕತ್ವ, ವಿದ್ಯಾರ್ಥಿವೇತನ ಹಾಗೂ ಕೌಶಲ ಅಭಿವೃದ್ಧಿ ಕೇಂದ್ರದ ಮೂಲಕ ಆಧುನಿಕ ಕಲಿಕಾ ಸೌಲಭ್ಯಗಳನ್ನೂ ಕಲ್ಪಿಸಲಾಗಿದೆ. ಔಷಧ ಕೇಂದ್ರದ ಸೇವೆಯನ್ನೂ ಪರಿಷತ್ತು ಒದಗಿಸುತ್ತಿದೆ ಎಂದರು.

ಗುರುನಾನಕ ಝರಾ ಸಾಹೀಬ್‌ನಲ್ಲಿ ಧಾರ್ಮಿಕ ಕಲಾಪ

ಸಡಗರ, ಸಂಭ್ರಮದ ಗುರುನಾನಕ್ ಜಯಂತಿ ಆಚರಣೆ

ಬೀದರ್, ನ. 27: 'ಜೋ ಬೋಲೇ ಸೋ ನಿಹಾಲ್', 'ವಾಹೆ ಗುರು ಕಾ ಖಾಲ್ಸಾ', 'ವಾಹೆ ಗುರು ಕಾ ಫತೇಹ್', 'ಸತ್‌ಶ್ರೀ ಅಕಾಲ್'...



ಹೀಗೆ ಸಿಖ್ ಧರ್ಮೀಯರು ಅಭಿಮಾನದಿಂದ ಘೋಷಣೆಗಳನ್ನು ಕೂಗುತ್ತ ಖಡ್ಗ ಹಿಡಿದು ಮೆರವಣಿಗೆಯಲ್ಲಿ ಓಡುವ ದೃಶ್ಯವೇ ರೋಮಾಂಚನಕಾರಿ. ಇಂತಹದ್ದೊಂದು ಅಪರೂಪದ ಸಂದರ್ಭಕ್ಕೆ ನಗರ ಮಂಗಳವಾರ ಸಂಜೆ ಸಾಕ್ಷಿಯಾಯಿತು.

ಸಿಖ್ ಧರ್ಮದ ಸಂಸ್ಥಾಪಕ ಗುರುನಾನಕ್ ದೇವ ಅವರ 557ನೇ ಜಯಂತಿ ಅಂಗವಾಗಿ ನಗರದ ನಾನಕ ಝಿರಾ ಸಹೀಬ್‌ನಲ್ಲಿ ನಡೆದ ಮೆರವಣಿಗೆಯಲ್ಲಿ ಮೇಲಿನ ದೃಶ್ಯಗಳನ್ನು ಕಂಡು ಜನ ಪುಳಕಿತರಾದರು. ನೀಲಿ, ಹಳದಿ ಬಣ್ಣದ ಧಾರ್ಮಿಕ ಧ್ವಜಗಳೊಂದಿಗೆ ಗುರುಗಳು ಮುಂದೆ ಹೆಜ್ಜೆ ಹಾಕಿದರೆ, ಅಲಂಕರಿಸಿದ ವಾಹನದಲ್ಲಿ 'ಗುರುಗ್ರಂಥ ಸಾಹಿಬ್' ಇರಿಸಿ ಮೆರವಣಿಗೆ ಮಾಡಿದರು. ವಾಹನದ ಬದಿಯಲ್ಲಿ ಕುಳಿತ ವ್ಯಕ್ತಿಯೊಬ್ಬರು ಗ್ರಂಥ ಸಾಹಿಬ್ ಪಠಣ ಮಾಡಿದರು. ನೂರಾರು ಜನ ಕತ್ತಿಗಳನ್ನು ಹಿಡಿದುಕೊಂಡು ಹೆಜ್ಜೆ ಹಾಕಿದರು. ಮಾರ್ಗದುದ್ದಕ್ಕೂ ಕತ್ತಿ ವರಸೆ ಸಾಹಸ ಪ್ರದರ್ಶಿಸಿ ಗಮನ ಸೆಳೆದರು. ಕಿರಿಯರಿಂದ ಹಿರಿಯರ ವರೆಗೆ ಎಲ್ಲರೂ ಕತ್ತಿ ಝಳಪಿಸಿ, ತಮ್ಮ ಕೌಶಲ ಪ್ರದರ್ಶಿಸಿದರು.

ಗುರುದ್ವಾರದ ಪರಿಸರದಿಂದ ಆರಂಭಗೊಂಡ ಮೆರವಣಿಗೆಯು ಉದಗೀರ್ ರಸ್ತೆ ಮೂಲಕ ಮಡಿವಾಳೇಶ್ವರ ವೃತ್ತ, ನೆಹರೂ ಕ್ರೀಡಾಂಗಣ, ಡಾ.ಬಿ.ಆರ್. ಅಂಬೇಡ್ಕರ್ ವೃತ್ತ ತಲುಪಿತು. ಪುನಃ ಅಲ್ಲಿಂದ ಗುರುದ್ವಾರದ ಕಡೆಗೆ ಮುಖ ಮಾಡಿತು. ಸ್ಥಳೀಯ ಸಿಖ್ಖರಲ್ಲದೇ ನೆರೆಯ ಮಹಾರಾಷ್ಟ್ರದ ಉದಗೀರ್, ನಾಂದೇಡ್, ಲಾತೂರ್, ಸೊಲ್ಲಾಪುರ, ತೆಲಂಗಾಣದ ಜಹೀರಾಬಾದ್, ಸಿಕಿಂದ್ರಾಬಾದ್, ಹೈದರಾಬಾದ್, ವಿಕಾರಾಬಾದ್ ಸೇರಿದಂತೆ ಹಲವು ಕಡೆಗಳಿಂದ ಹೆಚ್ಚಿನ ಸಂಖ್ಯೆಯ ಸಿಖ್ಖರು ಪಾಲ್ಗೊಂಡಿದ್ದರು.

ಪ್ರಮುಖ ಮಾರ್ಗಗಳಿಂದ ಮೆರವಣಿಗೆ ಹಾದು ಹೋಗುವಾಗ ಜನ ಸಿಖ್ಖರ ವಿವಿಧ ರೀತಿಯ ಕೌಶಲ ಕಂಡು ಬೆರಗಾದರು. ಮೊಬೈಲ್, ಕ್ಯಾಮರಾಗಳಲ್ಲಿ ದೃಶ್ಯಗಳನ್ನು ಸೆರೆಹಿಡಿದು ಸಂಭ್ರಮಿಸಿದರು. ಮೆರವಣಿಗೆ ಹಾದು ಹೋಗುವ ಮಾರ್ಗದುದ್ದಕ್ಕೂ ಪಟಾಕಿಗಳನ್ನು ಸಿಡಿಸಿದರು.

ಗೌರಿ ಹುಣ್ಣಿಮೆ ಇದ್ದದ್ದರಿಂದ ನಗರದಲ್ಲಿ ಮಳಿಗೆ, ಹೋಟೆಲ್‌ಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಗುರುನಾನಕರ ಜಯಂತಿ ಅದಕ್ಕೆ ಮತ್ತಷ್ಟು ಮೆರುಗು ತಂದುಕೊಟ್ಟಿತು. ಉದಗೀರ್ ರಸ್ತೆಯ ಗುರುದ್ವಾರದ ಮುಖ್ಯ ಪ್ರವೇಶ ದ್ವಾರದಿಂದ ಗುರುದ್ವಾರದ ತನಕ ವಿದ್ಯುತ್ ದೀಪಗಳ ಅಲಂಕಾರ ಮಾಡಲಾಗಿತ್ತು. ಮುಖ್ಯ ಮಂಟಪವನ್ನು ಹೂಗಳಿಂದ ಅಲಂಕರಿಸಲಾಗಿತ್ತು. ಸೋಮವಾರದಿಂದಲೇ ಜನ ಗುರುದ್ವಾರಕ್ಕೆ ಭೇಟಿ ಕೊಡಲು ಆರಂಭಿಸಿದ್ದರಿಂದ ಜಾತ್ರೆಯ ವಾತಾವರಣ ಸೃಷ್ಟಿಯಾಗಿತ್ತು. ಎಲ್ಲೆಲ್ಲೂ ಸಡಗರ, ಸಂಭ್ರಮ ಮನೆ ಮಾಡಿತ್ತು.

ಇನ್ನೂ ಸಂಸದ ಸಾಗರ್ ಖಂಡ್ರೆ ಅವರು ಗುರುದ್ವಾರಕ್ಕೆ ಭೇಟಿ ಕೊಟ್ಟು ದರ್ಶನ ಪಡೆದರು. ಗುರುದ್ವಾರ ಪ್ರಬಂಧಕ ಕಮಿಟಿ ಅಧ್ಯಕ್ಷ ಸರ್ದಾರ್ ಬಲಬೀರ್ ಸಿಂಗ್ ಮತ್ತಿತರರು ಉಪಸ್ಥಿತರಿದ್ದರು.

ಭಕ್ತರಿಗೆ ಲಂಗರ್‌ನಲ್ಲಿ (ದಾಸೋಹ) ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಚಿಕ್ಕಿ, ಜಾಮೂನ್, ಸಿಹಿ ಪಾಯಸ, ಚಪಾತಿ, ಪೂರಿ, ಸಾಗು, ಭಾಜಿ, ಪುಲಾವ್ ಉಣಬಡಿಸಿದರು. ಸಿಖ್ ಧರ್ಮೀಯರ ಜೊತೆಗೆ ಅನ್ಯ ಧರ್ಮೀಯರು ಗುರುದ್ವಾರಕ್ಕೆ ಭೇಟಿ ಕೊಟ್ಟು ದರ್ಶನ ಪಡೆದರು.

ಪ್ರಜೆಗಳ ಭರವಸೆಯ ಬದುಕಿಗೆ ಸಂವಿಧಾನವೇ ಬೆಳಕು: ಪ್ರೊ.ಶಶಿಕಾಂತ ಉಡಿಕೇರಿ

ಕಲಬುರಗಿ, ನ. 27: ಭವ್ಯ ಭಾರತದ ಪ್ರಜೆಗಳ ಭರವಸೆಯ ಬದುಕಿಗೆ ನಮ್ಮ ಸಂವಿಧಾನ ಬೆಳಕು ನೀಡಿದೆ. ಡಾ. ಅಂಬೇಡ್ಕರ್ ರಚಿಸಿದ ಸಂವಿಧಾನದ ಆಶಯದಿಂದ ಸೌಖ್ಯ ವಾತಾವರಣದಲ್ಲಿ ನೆಮ್ಮದಿ ಬದುಕನ್ನು ಕಾಣಲು ಸಾಧ್ಯವಾಗುತ್ತಿದೆ ಎಂದು ಕಲಬುರಗಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶಶಿಕಾಂತ ಎಸ್. ಉಡಿಕೇರಿ ಹೇಳಿದರು.



ದೇಶದ ಆಡಳಿತಕ್ಕೆ ಅಗತ್ಯ ಸಂವಿಧಾನ ಬೇಕೆಂದು ವಿದೇಶಗಳ ಸಂವಿಧಾನ ಅಧ್ಯಯನ, ಸಮಾಜದ ಬಾಧ್ಯತೆಗಳ ಬಗ್ಗೆ ಚಿಂತನೆ ನಡೆಸಿ ಸರ್ವಶ್ರೇಷ್ಠ ಸಂವಿಧಾನವನ್ನು ಬರೆದಿದ್ದಾರೆ. ಸಂವಿಧಾನದ ಆಶೋತ್ತರಗಳಿಗೆ ತಕ್ಕಂತೆ ಸಾಮಾಜಿಯಿಕ, ಶೈಕ್ಷಣಿಕ, ಆರ್ಥಿಕ, ಸಾಂಸ್ಕೃತಿಕ, ವಿಜ್ಞಾನ, ತಂತ್ರಜ್ಞಾನ, ಕೃಷಿ, ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿಗೆ ಸಂವಿಧಾನದ ಆಶಯದಿಂದ ಸಾಧ್ಯವಾಗಿದೆ. ಯುವಜನತೆ ಸಂವಿಧಾನ ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯ, ಸಹೋದರತೆಯ ಅಂಶಗಳನ್ನು ಅಳವಡಿಸಿಕೊಂಡು ಜಾತಿ, ಧರ್ಮ, ಬೇದವಿಲ್ಲದೆ ಬಯಸಿದಂತೆ ಬದುಕನ್ನು ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಎಸ್. ಎ. ಪಾಳೇಕರ ಮುಖ್ಯ ಅತಿಥಿಯಾಗಿ ಮಾತನಾಡಿ, ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ನ.26, 1949 ರಂದು ಸಂವಿಧಾನವನ್ನು ಅಂಗೀಕರಿಸಿದ ನೆನಪಿಗಾಗಿ ಸಂವಿಧಾನ ದಿನವನ್ನು ಪ್ರತಿವರ್ಷ ಆಚರಿಸಲಾಗುತ್ತಿದೆ. ಭಾರತೀಯರಿಗೆ ಇದೊಂದು ಪವಿತ್ರ ದಿನ. ಸಂವಿಧಾನದ ಆಶಯ, ಮೌಲ್ಯಗಳು, ಪ್ರಜಾಪ್ರಭುತ್ವದ ಮಹತ್ವಗಳನ್ನು ಕುರಿತು ಯುವಜನತೆಗೆ ಅರಿವು ಮೂಡಿಸುವ ಉದ್ದೇಶದಿಂದ 2015 ರಿಂದ ಸಂವಿಧಾನ ದಿನಾಚರಣೆಯನ್ನು ದೇಶದಾದ್ಯಂತ ಆಚರಿಸಲಾಗುತ್ತಿದೆ. ಡಾ. ಬಿ. ಆರ್. ಅಂಬೇಡ್ಕರ್ ಅವರ ಅಪ್ರತಿಮ ಮೇಧಾಶಕ್ತಿ, ಬೌದ್ಧಿಕ ತಪಸ್ಸು, ಪ್ರಜಾಪ್ರಭುತ್ವದ ಚಿಂತನೆಯ ಅಪಾರ ಜ್ಞಾನದಿಂದ ಬೃಹತ್‌ಸಂವಿಧಾನ ಸಾಧ್ಯವಾಗಿದೆ. 32 ಪದವಿ ಪಡೆದಿರುವ ಡಾ. ಬಿ. ಆರ್. ಅಂಬೇಡ್ಕರ್ ಫ್ರಾನ್ಸ್, ಅಮೇರಿಕಾ, ಇಂಗ್ಲೆಂಡ್, ಐರ್ಲೆಂಡ್ ಮುಂತಾದ ದೇಶಗಳ ಸಂವಿಧಾನಗಳನ್ನು ಅಧ್ಯಯನ ನಡೆಸಿದರು. ಸುಮಾರು 2 ವರ್ಷ, 11 ತಿಂಗಳು, 18 ದಿನಗಳ ನಿರಂತರ ಪರಿಶ್ರಮದಿಂದ ರೂಪಿಸಿದ ಲಿಖಿತ ಸಂವಿಧಾನವನ್ನು ನ. 26, 1949 ರಂದು ಸಮರ್ಪಿಸಿದರು. ಸಂಸದೀಯ ಆಡಳಿತ ವ್ಯವಸ್ಥೆಗೆ ಅನುಗುಣವಾದ ಅಂಶಗಳನ್ನು ಸಂವಿಧಾನದಲ್ಲಿ ಅಳವಡಿಸಿದ್ದಾರೆ. ಮೂಲಭೂತ ಹಕ್ಕುಗಳು, ಕರ್ತವ್ಯಗಳು, ನಿರ್ದೇಶಕ ತತ್ವಗಳು, ತಿದ್ದುಪಡಿ ಅವಕಾಶ, ಹಿಂದು ಸಂಹಿತೆ ಮಸೂದೆ ಕಾರ್ಮಿಕರು ಮತ್ತು ಮಹಿಳೆ ಶೋಷಣೆ ಮುಂತಾದ ಅಂಶಗಳ ಬಗ್ಗೆ ವಿವರಿಸಿದರು.

ಡಾ. ಬಿ. ಆರ್. ಅಂಬೇಡ್ಕರ್ ಅಧ್ಯ ಯನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಪ್ರೊ. ಹೂವಿನಭಾವಿ ಬಾಬಣ್ಣ ಸಂವಿಧಾನ ಪೀಠಿಕೆ ಬೋಧಿಸಿ ಪ್ರಾಸ್ತಾವಿಕವಾಗಿ ಮಾತನಾಡಿ, ಡಾ.ಬಿ. ಆರ್. ಅಂಬೇಡ್ಕರ್ ಅವರು ಅಪಾರ ಜ್ಞಾನ ಪಾಂಡಿತ್ಯದಿಂದ ಇಡೀ ಜಗತ್ತು ಅವರನ್ನು 'ಜ್ಞಾನದ ಸಂಕೇತ' ಎಂದು ಕರೆಯುತ್ತಿದೆ. ವಿದೇಶದಲ್ಲಿ ಓದಿ ದೇಶದ ಅನೇಕ ಸಮಸ್ಯೆ ಮತ್ತು ಸವಾಲುಗಳಿಗೆ ಸ್ಪಂದಿಸಿ ಪರಿಹಾರ ದೊರಕಿಸಿದ್ದಾರೆ. ಒಬ್ಬ ಶ್ರೇಷ್ಠ ಸಮಾಜಶಾಸ್ತ್ರಜ್ಞ, ನ್ಯಾಯ ಶಾಸ್ತ್ರಜ್ಞ, ಆರ್ಥಿಕ ತಜ್ಞ, ದಾರ್ಶನಿಕ, ದೇಶಪ್ರೇಮಿಯಾಗಿ ವೈವಿಧ್ಯಯ ಸಮಾಜದ ಶಾಶ್ವತ ಸುಧಾರಣೆಗೆ ಶ್ರಮಿಸಿ ದ್ದಾರೆ. ಸಂವಿಧಾನ ರಚನೆ, ರಚನಾ ಸಭೆಯಲ್ಲಿನ ಚರ್ಚೆಯ ಬಗ್ಗೆ ವಿವಯಿರಿಸಿದರು.

ಸಿಂಡಿಕೇಟ್ ಸದಸ್ಯ ಎಸ್. ಪಿ. ಸುಳ್ಳದ್‌ಮಾತನಾಡಿ ಇಡೀ ದೇಶದ ಜನರಿಗೆ ಒಂದೇ ಸಂವಿಧಾನವಿದೆ. ವಿವಿಧ ಸಂಸ್ಕೃತಿ, ಬಾಷೆ, ವೈವಿಧ್ಯತೆಯಿದೆ. ಸರ್ವರನ್ನು ಒಳಗೊಳ್ಳುವ ಮೌಲ್ಯಗಳನ್ನು ಅಂಬೇಡ್ಕರ್ ಸಂವಿಧಾನದಲ್ಲಿ ಅಳವಡಿಸಿದ್ದಾರೆ. ಪಟ್ಟಭದ್ರ ಹಿತಾಸಕ್ತಿಗಳಿಂದ ಸಂವಿಧಾನ ಬದಲಾವಣೆ ಹುನ್ನಾರ ನಡೆದಿದೆ. ಯುವಕರು, ನಾಗರಿಕರು ಎಚ್ಚರದಿಂದಿರಬೇಕು. ಸಮಾಜದಲ್ಲಿ ಜಾತಿ, ಧರ್ಮ ಸಂಘರ್ಷ ವನ್ನು ಮುನ್ನೆಲೆಗೆ ತಂದು ಕಲುಷಿತಗೊಳಿಸಲಾಗುತ್ತಿದೆ. ಸಂವಿಧಾನ ಆಶಯ ವನ್ನು ಅರಿಕೊಳ್ಳಬೇಕು ಎಂದರು.

ಹಸೀನಾ ಕೈಕೋಳದಲ್ಲೇ ಬರಬೇಕು: ಬಾಂಗ್ಲಾದೇಶ ಸರ್ಕಾರ



ಢಾಕಾ, ನ.27: ಬಾಂಗ್ಲಾದೇಶದಿಂದ ಪದಚ್ಯುತಗೊಂಡಿರುವ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರು ಡಿಸೆಂಬರ್ 16ರಂದು ಸ್ವದೇಶಕ್ಕೆ ಮರಳುವುದಾಗಿ ಘೋಷಿಸಿರುವ ಬೆನ್ನಲ್ಲೇ, ಬಾಂಗ್ಲಾದೇಶ ಸರ್ಕಾರ ತೀವ್ರ ವಿರೋಧ ವ್ಯಕ್ತಪಡಿಸಿದೆ. ಹಸೀನಾ ಅವರನ್ನು ಭಯೋತ್ಪಾದಕಿ ಎಂದು ಕರೆದಿರುವ ಸರ್ಕಾರ, ಅವರು ಭಾರತದಿಂದ ಹಸ್ತಾಂತರಗೊಂಡು ಮಾತ್ರ ದೇಶಕ್ಕೆ ಮರಳಲು ಸಾಧ್ಯ. ಅದೂ ಕೈಗೆ ಕೋಳ ಹಾಕಿಕೊಂಡೇ ಬರಬೇಕಾಗುತ್ತದೆ ಎಂದು ಹೇಳಿದೆ.

ಈ ಬಗ್ಗೆ ಸುದ್ದಿಗಾರರ ಜತೆ ಮಾತನಾಡಿದ ಬಾಂಗ್ಲಾದೇಶದ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಹುಮಾಯೂನ್ ಕಬೀರ್, "ಬಾಂಗ್ಲಾದೇಶದ ಜನರಿಗೆ ಭಯೋತ್ಪಾದನೆ ಎಂದರೆ ಶೇಖ್ ಹಸೀನಾ ಪ್ರೋತ್ಸಾಹಿಸಿದ ಅವಾಮಿ ಲೀಗ್‌ನ ಭಯೋತ್ಪಾದನೆ ಮಾತ್ರ ನೆನಪಾಗುತ್ತದೆ. ಅವರು ಅಪರಾಧಿ. ದೇಶದಿಂದ ಪರಾರಿಯಾಗಿರುವ ಭಯೋತ್ಪಾದಕಿ ಎಂದು ಆರೋಪಿಸಿದ್ದಾರೆ. ಹಸೀನಾ ಹಣ ಖರ್ಚು ಮಾಡಿ, ಜನರನ್ನು ನೇಮಿಸಿಕೊಂಡು ತಮ್ಮ ಸ್ವದೇಶ ವಾಪಸಾತಿ ಬಗ್ಗೆ ಸುದ್ದಿಗಳನ್ನು ಪ್ರಕಟಿಸಬಹುದು. ಆದರೆ ಆಸೆ ಮತ್ತು ವಾಸ್ತವ ಎರಡೂ ಬೇರೆ ಎಂದು ಸಚಿವರು ವ್ಯಂಗ್ಯವಾಡಿದ್ದಾರೆ.

"ಒಬ್ಬ ಭಯೋತ್ಪಾದಕಿಯನ್ನು ಹಸ್ತಾಂತರ ಪ್ರಕ್ರಿಯೆ ಮೂಲಕ ಹೊರತುಪಡಿಸಿ ಬೇರೆ ಯಾವುದೇ ರೀತಿಯಲ್ಲಿ ದೇಶಕ್ಕೆ ಮರಳಲು ಬಿಡುವುದಿಲ್ಲ. ಆಕೆ ಕೈಗೆ ಕೋಳ ಹಾಕಿಕೊಂಡೇ ಬರಬೇಕು. ಹಸೀನಾ ಅವರಿಗೆ ಬಾಂಗ್ಲಾದೇಶಕ್ಕೆ ವಿಮಾನದಲ್ಲಿ ಮರಳುವ ಕನಸು ಬೀಳುತ್ತಿರಬಹುದು. ಆದರೆ ಕನಸು ಮತ್ತು ವಾಸ್ತವದ ನಡುವಿನ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಬೇಕು" ಎಂದು ಹೇಳಿದ್ದಾರೆ.

ಬಾಂಗ್ಲಾದೇಶದ ವಿಮಾನದಲ್ಲೇ ಮರಳಲು ಹಸೀನಾ ಮನವಿ: ತಮ್ಮ ಸ್ವದೇಶ ವಾಪಸಾತಿಗೆ ಅಗತ್ಯವಾದ ದಾಖಲೆಗಳನ್ನು ಒದಗಿಸುವಂತೆ ಹಸೀನಾ ಬಾಂಗ್ಲಾದೇಶ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಅಲ್ಲದೆ, ಬಾಂಗ್ಲಾದೇಶದ ರಾಷ್ಟ್ರೀಯ ವಿಮಾನಯಾನ ಸಂಸ್ಥೆ ಬಿಮಾನ್ ಬಾಂಗ್ಲಾದೇಶ ಏರ್‌ಲೈನ್ಸ್‌ನ ವಿಮಾನದ ಮೂಲಕ ತಮ್ಮನ್ನು ಸ್ವದೇಶಕ್ಕೆ ಕರೆತರಲು ವ್ಯವಸ್ಥೆ ಮಾಡಬೇಕು ಎಂದು ಮನವಿ ಮಾಡಿದ್ದಾರೆ. 2024ರಲ್ಲಿ ಪ್ರತಿಭಟನೆ ತೀವ್ರಗೊಂಡ ಬಳಿಕ ಹಸೀನಾ ಭಾರತಕ್ಕೆ ಪಲಾಯನ ಮಾಡಿದ್ದರು. ಆಗ ಅವರ ಪಾಸ್‌ಪೋರ್ಟ್ ಸೇರಿದಂತೆ ಹಲವು ಪ್ರಯಾಣ ದಾಖಲೆಗಳನ್ನು ರದ್ದುಗೊಳಿಸಲಾಗಿತ್ತು ಎಂದು ವರದಿಯಾಗಿದೆ. ಆದರೆ, ಹಸೀನಾ ಅವರನ್ನು ಭಾರತದಿಂದ ಹಸ್ತಾಂತರಿಸಿಕೊಳ್ಳಬೇಕೆಂಬ ನಿಲುವಿಗೆ ಬಾಂಗ್ಲಾದೇಶ ಸರ್ಕಾರ ಬದ್ಧವಾಗಿದೆ. ಹೀಗಾಗಿ ಡಿಸೆಂಬರ್ 16ರಂದು ಅವರು ನಿಜವಾಗಿಯೂ ಸ್ವದೇಶಕ್ಕೆ ಮರಳುತ್ತಾರೆಯೇ ಎಂಬ ಕುತೂಹಲ ಮೂಡಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಕುತೂಹಲ ಶೇಖ್ ಹಸೀನಾ ಅವರ ಸ್ವದೇಶ ವಾಪಸಾತಿ ಈಗ ಭಾರತ ಮತ್ತು ಬಾಂಗ್ಲಾದೇಶ ನಡುವಿನ ದ್ವಿಪಕ್ಷೀಯ ವಿಚಾರವಾಗಿ ಮಾತ್ರ ಉಳಿದಿಲ್ಲ. ಅಂತರರಾಷ್ಟ್ರೀಯ ಮಟ್ಟದಲ್ಲೂ ಈ ಬೆಳವಣಿಗೆಯ ಬಗ್ಗೆ ಕುತೂಹಲ ಹೆಚ್ಚಾಗಿದೆ. ಒಂದೆಡೆ ಡಿಸೆಂಬರ್ 16ರಂದು ಬಾಂಗ್ಲಾದೇಶಕ್ಕೆ ಮರಳಲು ಹಸೀನಾ ಸಿದ್ಧತೆ ನಡೆಸುತ್ತಿದ್ದರೆ, ಮತ್ತೊಂದೆಡೆ ವಾಪಸಾದರೆ ಬಂಧಿಸುವುದಾಗಿ ಅಲ್ಲಿನ ಸರ್ಕಾರ ಎಚ್ಚರಿಸಿದೆ. ಹೀಗಾಗಿ ಅವರ ಮರಳುವಿಕೆ ಬಾಂಗ್ಲಾದೇಶದ ರಾಜಕೀಯದಲ್ಲಿ ಮತ್ತೊಂದು ದೊಡ್ಡ ಸಂಘರ್ಷಕ್ಕೆ ಕಾರಣವಾಗುವ ಸಾಧ್ಯತೆ ಇದೆ.

ಬಾಂಗ್ಲಾದೇಶಕ್ಕೆ ಅಮೆರಿಕ ಖಡಕ್ ಎಚ್ಚರಿಕೆ!

ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಡಿಸೆಂಬರ್ 16ರಂದು ಸ್ವದೇಶಕ್ಕೆ ಮರಳಲು ಸಿದ್ಧತೆ ನಡೆಸಿರುವ ಬೆನ್ನಲ್ಲೇ, ಅವರಿಗೆ ಯಾವುದೇ ಅಪಾಯವಾದರೂ ಅದಕ್ಕೆ ತಾರಿಖ್ ರೆಹಮಾನ್ ನೇತೃತ್ವದ ಸರ್ಕಾರವೇ ಸಂಪೂರ್ಣ ಹೊಣೆ ಹೊರಬೇಕಾಗುತ್ತದೆ ಎಂದು ಅಮೆರಿಕ ಖಡಕ್ ಎಚ್ಚರಿಕೆ ನೀಡಿದೆ. ನ್ಯೂಯಾರ್ಕ್‌ನಲ್ಲಿ ನಡೆದ 'ಬಾಂಗ್ಲಾದೇಶದ ಭವಿಷ್ಯ' ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಮಾಜಿ ಪೆಂಟಗನ್ ಅಧಿಕಾರಿ ಮೈಕೆಲ್ ರೂಬಿನ್ ಅವರು, ಶೇಖ್ ಹಸೀನಾ ವಿಚಾರದಲ್ಲಿ ಬಾಂಗ್ಲಾದೇಶದ ಸರ್ಕಾರದೊಂದಿಗೆ ಭಾರತ ರಾಜಿ ಮಾಡಿಕೊಳ್ಳಬಾರದು ಎಂದು ಒತ್ತಾಯಿಸಿದ್ದಾರೆ.

"ಶೇಖ್ ಹಸೀನಾ ಅವರ ತಲೆಯ ಒಂದು ಕೂದಲಿಗೂ ಹಾನಿಯಾದರೆ ಅದಕ್ಕೆ ತಾರಿಖ್ ರೆಹಮಾನ್ ಸೇರಿದಂತೆ ಅವರ ಸರ್ಕಾರದವರೇ ಸಂಪೂರ್ಣ ಹೊಣೆಗಾರ ರಾಗುತ್ತಾರೆ ಎಂಬ ಸಂದೇಶವನ್ನು ಈಗಲೇ ಸ್ಪಷ್ಟವಾಗಿ ನೀಡುವ ಸಮಯ ಬಂದಿದೆ" ಎಂದು ರೂಬಿನ್ ಹೇಳಿದ್ದಾರೆ.

2002ರಿಂದ 2004ರವರೆಗೆ ಅಮೆರಿಕದ ರಕ್ಷಣಾ ಇಲಾಖೆಯಾದ ಪೆಂಟಗನ್‌ನಲ್ಲಿ ಕಾರ್ಯನಿರ್ವಹಿಸಿದ್ದ ರೂಬಿನ್, ಢಾಕಾದಲ್ಲಿರುವ ಅಮೆರಿಕದ ರಾಯಭಾರಿ ಸೇರಿದಂತೆ ಇತರ ದೇಶಗಳ ರಾಜತಾಂತ್ರಿಕ ಪ್ರತಿನಿಧಿಗಳೂ ಇದೇ ಸಂದೇಶವನ್ನು ಬಾಂಗ್ಲಾದೇಶ ಸರ್ಕಾರಕ್ಕೆ ತಲುಪಿಸಬೇಕು ಎಂದು ಆಗ್ರಹಿಸಿದ್ದಾರೆ.

ರೋಹಿತ್ ಶರ್ಮಾ ಮತ್ತೆ ಮುಂಬೈ ಇಂಡಿಯನ್ಸ್ ನಾಯಕ



ಮುಂಬೈ, ನ.27: ರೋಹಿತ್ ಶರ್ಮಾ ಮುಂಬೈ ಇಂಡಿಯನ್ಸ್ ತಂಡದ ನಾಯಕರಾಗಿ ಮರಳಿದ್ದಾರೆ. ಭಾರತ ತಂಡದ ಎಲ್ಲಾ ಮಾದರಿ ಕ್ರಿಕೆಟ್ ತಂಡಗಳ ನಾಯಕರಾಗಿದ್ದಾಗಲೇ, ಮುಂಬೈ ಇಂಡಿಯನ್ಸ್ ಫ್ರಾಂಚೈಸಿ ಅವರನ್ನು ನಾಯಕತ್ವದಿಂದ ಕೆಳಗಿಳಿಸಿತ್ತು. ಆ ಘಟನೆ ನಡೆದು ನಿಖರವಾಗಿ ಮೂರು ವರ್ಷಗಳ ನಂತರ, ಇದೀಗ ಹಾರ್ದಿಕ್ ಪಾಂಡ್ಯ ಅವರ ಬದಲಿಗೆ ರೋಹಿತ್ ಶರ್ಮಾ ಅವರನ್ನು ಮತ್ತೆ ನಾಯಕರನ್ನಾಗಿ ನೇಮಿಸಲಾಗಿದೆ. 2027ರ ಮೆಗಾ ಹರಾಜಿಗೂ ಮುನ್ನ ರೋಹಿತ್ ಅವರನ್ನು ಮತ್ತೆ ನಾಯಕನಾಗಿ ಮುಂಬೈ ಇಂಡಿಯನ್ಸ್ ನೇಮಿಸಿದೆ. ಇದೇ ಅವರ ಕೊನೆಯ ಆವೃತ್ತಿಯಾಗುವ ಸಾಧ್ಯತೆಯಿದ್ದು, ಇದೊಂದು ತಾತ್ಕಾಲಿಕ ವ್ಯವಸ್ಥೆ ಎನ್ನಲಾಗುತ್ತಿದೆ. ಮುಂಬರುವ ಆವೃತ್ತಿಗಾಗಿ 'ಮಿನಿ-ಹರಾಜು' ಡಿ.16 ರಂದು ಗೋವಾದಲ್ಲಿ ನಡೆಯಲಿದೆ. ಮುಂಬೈ ಇಂಡಿಯನ್ಸ್ ತಂಡದಲ್ಲಿ ನಾಯಕರಾಗಿ ಕಳೆದ ಮೂರು ವರ್ಷಗಳಲ್ಲಿ ಹಾರ್ದಿಕ್ ಪಾಂಡ್ಯ ಯಶಸ್ವಿ ಆಗಿರಲಿಲ್ಲ.

ಈ ಹಿನ್ನೆಲೆಯಲ್ಲಿ, ರೋಹಿತ್ ಶರ್ಮಾ ಅವರನ್ನು ಮತ್ತೆ ನಾಯಕರನ್ನಾಗಿ ಮಾಡಲು ಮುಂಬೈ ಇಂಡಿಯನ್ಸ್ ಆಸಕ್ತಿ ಹೊಂದಿತ್ತು ಮತ್ತು ಹಾರ್ದಿಕ್ ಪಾಂಡ್ಯ ಅವರನ್ನು ಬೇರೆ ತಂಡಕ್ಕೆ ವರ್ಗಾಯಿಸುವ ಮಾತುಕತೆಗಳು ನಡೆದಿದ್ದವು ಎಂದು ಕಳೆದ ತಿಂಗಳು ವರದಿಯಾಗಿತ್ತು.

ಕಳೆದ ಐಪಿಎಲ್ ಆವೃತ್ತಿಯ ಮಧ್ಯದಲ್ಲಿ ತಂಡವು ಕಳಪೆ ಪ್ರದರ್ಶನ ನೀಡುತ್ತಿದ್ದಾಗ, ಹಾರ್ದಿಕ್ ಪಾಂಡ್ಯ ಅವರಿಂದ ನಾಯಕತ್ವವನ್ನು ರೋಹಿತ್ ಶರ್ಮಾ ಅವರಿಗೆ ವಹಿಸಿಕೊಡಲು ಮುಂಬೈ ಇಂಡಿಯನ್ಸ್ ಬಯಸಿತ್ತು ಎಂದು ತಿಳಿದುಬಂದಿದೆ. ಇದಕ್ಕೂ ಮುನ್ನ ಈ ತಿಂಗಳ ಆರಂಭದಲ್ಲಿ, ಮುಂಬೈ ಇಂಡಿಯನ್ಸ್ ತಂಡವು ಹಾರ್ದಿಕ್ ಪಾಂಡ್ಯ ಅವರನ್ನು ಪಂಜಾಬ್ ಕಿಂಗ್ಸ್‌ಗೆ ನೀಡಿ, ಬದಲಿಗೆ ಎಡಗೈ ವೇಗದ ಬೌಲರ್ ಅರ್ಷದೀಪ್ ಸಿಂಗ್ ಅವರನ್ನು 18 ಕೋಟಿ ರೂ. ಗಳಿಗೆ ಪಡೆದಿತ್ತು.2027ರ ಐಪಿಎಲ್ ಸೀಸನ್‌ಗೆ ಮುಂಬೈ ಇಂಡಿಯನ್ಸ್ ತಂಡವನ್ನು ರೋಹಿತ್ ಶರ್ಮಾ ಮುನ್ನಡೆಸಲಿದ್ದಾರೆ ಎಂದು ಮುಂಬೈ ಇಂಡಿಯನ್ಸ್ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

ಮುಂಬೈ ಇಂಡಿಯನ್ಸ್ ನನ್ನ ಜೀವನದ ಒಂದು ದೊಡ್ಡ ಭಾಗವಾಗಿದೆ. ಈ ತಂಡವನ್ನು ಮುನ್ನಡೆಸುವುದನ್ನು ನಾನು ಯಾವಾಗಲೂ ಹೆಮ್ಮೆಯ ವಿಷಯವೆಂದು ಭಾವಿಸಿದ್ದೇನೆ ಎಂದು ಫ್ರಾಂಚೈಸಿ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ರೋಹಿತ್ ಶರ್ಮಾ ಹೇಳಿದ್ದಾರೆ.

ಚೀನಾದಲ್ಲಿ ಬೃಹತ್ ಚಿನ್ನದ ನಿಕ್ಷೇಪ: 2 ಸಾವಿರಕ್ಕೂ ಅಧಿಕ ಮೆಟ್ರಿಕ್ ಟನ್ ಬಂಗಾರ ಪತ್ತೆ

ಹುನಾನ್(ಚೀನಾ), ನ.27: 2 ಸಾವಿರಕ್ಕೂ ಅಧಿಕ ಮೆಟ್ರಿಕ್ ಟನ್ ಚಿನ್ನದ ನಿಕ್ಷೇಪವನ್ನು ಇದೀಗ ಚೀನಾ ಪತ್ತೆಹಚ್ಚಿದ್ದು, ಒಂದು ಪ್ರಮುಖ ಆವಿಷ್ಕಾರದಲ್ಲಿ ಎರಡು ಪ್ರಾಂತ್ಯಗಳ ಭೂಮಿಯ ಅಡಿಯಲ್ಲಿ ಇದನ್ನು ಕಂಡುಹಿಡಿದಿರುವುದಾಗಿ ವರದಿಗಳು ಉಲ್ಲೇಖಿಸಿವೆ.

ಹಳದಿ ಲೋಹಕ್ಕೆ ಜಾಗತಿಕವಾಗಿ ಭಾರಿ ಬೇಡಿಕೆ ಹೆಚ್ಚುತ್ತಿರುವ ಬೆನ್ನಲ್ಲೇ ಚೀನಾದಲ್ಲಿ ಪತ್ತೆಯಾಗಿರುವ ಬೃಹತ್ ಪ್ರಮಾಣದ ನಿಕ್ಷೇಪ ಸದ್ಯ ಹಲವರ ಹುಬ್ಬೇರಿಸಿದೆ.

ದೇಶದ ಎರಡು ಪ್ರಮುಖ ಪ್ರದೇಶಗಳಲ್ಲಿ ಪತ್ತೆಯಾಗಿರುವ ಚಿನ್ನದ ನಿಕ್ಷೇಪಗಳ ಒಟ್ಟು ಮೌಲ್ಯ ಬರೋಬ್ಬರಿ 300 ಬಿಲಿಯನ್ ಡಾಲರ್ (25 ಲಕ್ಷ ಕೋಟಿ ರೂ.ಗೂ ಹೆಚ್ಚು) ಎಂದು ಅಂದಾಜಿಸಲಾಗಿದೆ. ಈ ಪೈಕಿ ಒಂದು ನಿಕ್ಷೇಪ ಹುನಾನ್ ಪ್ರಾಂತ್ಯದಲ್ಲಿದ್ದರೆ, ಮತ್ತೊಂದು ಲಿಯಾವೊನಿಂಗ್ ಪ್ರಾಂತ್ಯದ ದಾಡೊಂಗೌ ಪ್ರದೇಶಕ್ಕೆ ಸೇರಿದೆ.


1,000 ಟನ್‌ಗೂ ಅಧಿಕ ಚಿನ್ನ

ಚೀನಾದ ಹುನಾನ್ ಭಾಗದ ವಾಂಗು ಪ್ರದೇಶದಲ್ಲಿ ಪತ್ತೆಯಾಗಿರುವ ಚಿನ್ನದ ನಿಕ್ಷೇಪದ ಕುರಿತು 2024ರಲ್ಲಿ ಘೋಷಣೆ ಮಾಡಲಾಗಿತ್ತು. ಆರಂಭದಲ್ಲಿ ಸುಮಾರು 2,000 ಮೀಟರ್ ಆಳದಲ್ಲಿ ನಡೆಸಿದ ಭೂವೈಜ್ಞಾನಿಕ ಪರಿಶೋಧನೆಯಲ್ಲಿ 300 ಟನ್ ಚಿನ್ನ ಪತ್ತೆಯಾಗಿತ್ತು. ನಂತರ ಮತ್ತಷ್ಟು 1,000 ಮೀಟರ್ ಆಳದಲ್ಲಿ ನಡೆಸಿದ ಪರಿಶೋಧನೆಯಿಂದ ಈ ನಿಕ್ಷೇಪದ ಪ್ರಮಾಣ 1,000 ಟನ್‌ಗೂ ಹೆಚ್ಚಿರಬಹುದು ಎಂಬ ಅಂದಾಜಿಸಲಾಗಿತ್ತು.

ಚೀನಾದ ಅಧಿಕೃತ ಸುದ್ದಿಸಂಸ್ಥೆ ಈ ಪತ್ತೆಯನ್ನು 'ಸೂಪರ್‌ಜೈಂಟ್' ಚಿನ್ನದ ನಿಕ್ಷೇಪ ಎಂದು ಹೇಳಿತ್ತು. ಈ ಪ್ರದೇಶದ ಬಂಡೆಗಳ ಮಾದರಿಗಳಲ್ಲಿ ಬರಿಗಣ್ಣಿಗೆ ಕಾಣುವ ಚಿನ್ನದ ಕಣಗಳೂ ಪತ್ತೆಯಾಗಿದ್ದವು. ಈ ನಿಕ್ಷೇಪದ ಮೌಲ್ಯವನ್ನು ಆರಂಭದಲ್ಲಿ 600 ಬಿಲಿಯನ್ ಯುವಾನ್‌ಗೂ ಹೆಚ್ಚು ಎಂದು ಅಂದಾಜಿಸಲಾಗಿತ್ತು. ಅಂದಿನ ಲೆಕ್ಕಾಚಾರದ ಪ್ರಕಾರ ಇದು 83 ಶತಕೋಟಿ ಡಾಲರ್ ಮೌಲ್ಯದ್ದಾಗಿತ್ತು ಎನ್ನಲಾಗಿದೆ.

ಇದೀಗ ಚೀನಾದ ಲಿಯಾವೊನಿಂಗ್ ಪ್ರಾಂತ್ಯದ ದಾಡೊಂಗೌ ಪ್ರದೇಶದಲ್ಲಿ ಪತ್ತೆಯಾಗಿರುವ ಚಿನ್ನದ ನಿಕ್ಷೇಪ ಮತ್ತಷ್ಟು ಕುತೂಹಲ ಮೂಡಿಸಿದೆ. ಇದು ವಾಂಗು ಪ್ರದೇಶದ ನಿಕ್ಷೇಪಕ್ಕಿಂತಲೂ ದೊಡ್ಡದಾಗಿದೆ ಎಂದು ಅಧ್ಯಯನಗಳು ತಿಳಿಸಿವೆ. ಚೀನಾ ಮೈನಿಂಗ್ ಮ್ಯಾಗಜೀನ್‌ನಲ್ಲಿ ಪ್ರಕಟವಾದ ಅಧ್ಯಯನದ ಪ್ರಕಾರ, ಈ ಪ್ರದೇಶದಲ್ಲಿ ನಡೆಸಿದ ಪ್ರತಿಯೊಂದು ಬೋರ್‌ಹೋಲ್ ಪರಿಶೋಧನೆಯಲ್ಲೂ ಚಿನ್ನದ ಅಂಶ ಪತ್ತೆಯಾಗಿದೆ.

ಬೀಜಿಂಗ್‌ನ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಸಂಪನ್ಮೂಲ ಇಂಜಿನಿಯರ್ ಡು ಜಿಯಾ ನೇತೃತ್ವದ ತಂಡ ಈ ಅಧ್ಯಯನ ನಡೆಸಿದೆ. 200ಕ್ಕೂ ಹೆಚ್ಚು ಕೊರೆಯುವ



ಬಾವಿಗಳ ದಾಖಲೆಗಳು, ಸ್ಥಳ ಪರಿಶೀಲನೆ ಮತ್ತು ಬಂಡೆಗಳಲ್ಲಿನ ಸ್ಫಟಿಕಗಳ ಸೂಕ್ಷ್ಮ ವಿಶ್ಲೇಷಣೆಯನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಬಂಡೆಗಳ ಒಳಗೆ ಅಡಗಿದೆ ಚಿನ್ನದ ಸಂಪತ್ತು

ಸಾಮಾನ್ಯವಾಗಿ ಚಿನ್ನದ ನಿಕ್ಷೇಪಗಳು ಇಳಿಜಾರಿನಲ್ಲಿರುವ ಸ್ಫಟಿಕ ಶಿಲೆಯ ಸ್ತರಗಳಲ್ಲಿ ಕಂಡುಬರುತ್ತವೆ. ಆದರೆ, ದಾಡೊಂಗೌ ಪ್ರದೇಶದಲ್ಲಿ ಚಿನ್ನವು ಫಿಲ್ಮೈಟ್ ಎಂಬ ಸೂಕ್ಷ್ಮ ಕಣಗಳಿರುವ ರೂಪಾಂತರಿತ ಬಂಡೆಗಳ ಸಮತಟ್ಟಾದ ಪದರಗಳಲ್ಲಿ ಹರಡಿಕೊಂಡಿದೆ ಎಂದು ಸಂಶೋಧಕರು ತಿಳಿಸಿದ್ದಾರೆ.

ಜಗತ್ತಿನ ಇತರ ಪ್ರದೇಶಗಳಲ್ಲೂ ಇಂತಹ ನಿಕ್ಷೇಪ ಇದೆಯೇ?

ಸಾಮಾನ್ಯವಾಗಿ ಕಂಡುಬರುವ ಚಿನ್ನದ ನಿಕ್ಷೇಪಗಳಿಗಿಂತ ಭಿನ್ನವಾದ ಭೂವೈಜ್ಞಾನಿಕ ರಚನೆ ಇರುವುದರಿಂದ ಇಂತಹ ಪ್ರದೇಶಗಳನ್ನು ಈ ಹಿಂದೆ ಸಂಶೋಧಕರು ಗಮನಿಸದೇ ಹೋಗಿರುವ ಸಾಧ್ಯತೆಯಿದೆ ಎಂದು ಅಧ್ಯಯನ ಸೂಚಿಸಿದೆ. ಪೆಸಿಫಿಕ್ ಸಾಗರದ ಸುತ್ತಮುತ್ತಲಿನ ಪ್ರದೇಶಗಳು, ಜಿಯಾಡೊಂಗ್ ಪರ್ಯಾಯ ದ್ವೀಪ, ಅಲಾಸ್ಕಾ ಮತ್ತು ರಷ್ಯಾದ ದೂರಪ್ರಾಚ್ಯ ಭಾಗಗಳಲ್ಲೂ ಭೂಮಿಯ ಹೊರಪದರದ ಚಲನೆಯಿಂದ ಇಂತಹ ನಿಕ್ಷೇಪ ರೂಪುಗೊಂಡಿರಬಹುದು ಎಂದು ಸಂಶೋಧಕರು ತಿಳಿಸಿದ್ದಾರೆ. ಒಟ್ಟಿನಲ್ಲಿ, ವಾಂಗು ಮತ್ತು ದಾಡೊಂಗೌ ಪ್ರದೇಶಗಳಲ್ಲಿನ ಚಿನ್ನದ ನಿಕ್ಷೇಪಗಳು ಚೀನಾದ ಖನಿಜ ಸಂಪತ್ತಿನ ಬಗ್ಗೆ ಹೊಸ ನಿರೀಕ್ಷೆ ಮೂಡಿಸಿವೆ. ಈ ಎರಡೂ ಪ್ರದೇಶಗಳ ಚಿನ್ನದ ಒಟ್ಟು ಮೌಲ್ಯವನ್ನು ಪ್ರಸ್ತುತ ಬೆಲೆಗಳ ಆಧಾರದಲ್ಲಿ 300 ಶತಕೋಟಿ ಡಾಲರ್ ಎಂದು ಅಂದಾಜಿಸಲಾಗಿದೆ. ಆದರೆ, ಇಷ್ಟೊಂದು ದೊಡ್ಡ ಪ್ರಮಾಣದ ಚಿನ್ನವನ್ನು ವಾಣಿಜ್ಯಿಕವಾಗಿ ಹೊರತೆಗೆಯಲು ಸಾಧ್ಯವೇ ಎಂಬುದನ್ನು ಮುಂದಿನ ಪರಿಶೋಧನೆ ಮತ್ತು ಗಣಿಗಾರಿಕೆ ಪ್ರಕ್ರಿಯೆಗಳು ನಿರ್ಧರಿಸಲಿವೆ.

ಇಲ್ಲಿನ ಚಿನ್ನದ ಪ್ರಮಾಣ ಪ್ರತಿ ಟನ್ ಬಂಡೆಯಲ್ಲಿ ಸುಮಾರು 0.3ರಿಂದ 1 ಗ್ರಾಂನಷ್ಟಿದೆ. ಸರಾಸರಿ ಪ್ರಮಾಣ 0.56 ಗ್ರಾಂ ಎಂದು ಅಧ್ಯಯನದಲ್ಲಿ ಉಲ್ಲೇಖಿಸಲಾಗಿದೆ. ಚಿನ್ನವನ್ನು ಹೊರತೆಗೆಯುವ ಪ್ರಕ್ರಿಯೆಯಲ್ಲಿ ಶೇ.65ರಿಂದ ಶೇ.91ರಷ್ಟು ಚಿನ್ನವನ್ನು ಮರುಪಡೆಯುವ ಸಾಧ್ಯತೆಯಿದೆ ಎಂದು ಸಂಶೋಧಕರು ಅಂದಾಜಿಸಿದ್ದಾರೆ.

ಚಿನ್ನದ ನಿಕ್ಷೇಪ ಸೃಷ್ಟಿ ಹೇಗೆ?

ಸಂಶೋಧಕರ ಪ್ರಕಾರ, ಈ ಚಿನ್ನದ ನಿಕ್ಷೇಪ ಒಂದೇ ಹಂತದಲ್ಲಿ ರೂಪುಗೊಂಡಿಲ್ಲ. ಭೂಮಿಯ ಹೊರಪದರದಲ್ಲಿ ಒತ್ತಡದ ಸ್ವರೂಪ ಬದಲಾಗುತ್ತಿದ್ದ ಆರಂಭಿಕ ಕ್ರಿಟೇಷಿಯಸ್ ಯುಗದಲ್ಲಿ ಇದರ ಪ್ರಮುಖ ರಚನೆ ಸಂಭವಿಸಿರಬಹುದು.

ಟಾನ್-ಲು ಫಾಲ್ಟ್ ಎಂಬ ಭೂವೈಜ್ಞಾನಿಕ ಬಿರುಕು ಪ್ರದೇಶದ ಚಲನೆಯೂ ಚಿನ್ನದ ನಿಕ್ಷೇಪಗಳಿರುವ ಸಮತಟ್ಟಾದ ಪದರಗಳ ರಚನೆಗೆ ಕಾರಣವಾಗಿರಬಹುದು ಎಂದು ಅಧ್ಯಯನ ಹೇಳಿದೆ.

ಜ್ವಾಲಾಮುಖಿ ಚಟುವಟಿಕೆ ಅಥವಾ ಒಂದೇ ಗ್ರಾನೈಟ್ ಶಿಲೆಯ ಒಳನುಗ್ಗುವಿಕೆಯಿಂದ ಈ ನಿಕ್ಷೇಪ ರೂಪುಗೊಂಡಿಲ್ಲ. ಆದರೆ, ಭೂಗರ್ಭದಲ್ಲಿನ ಮ್ಯಾಗ್ಮಾದ ಶಾಖ ಇದರಲ್ಲಿ ಪಾತ್ರ ವಹಿಸಿರಬಹುದು ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.







ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ
(ರಸ್ತೆ ಅಪಘಾತ ಮುಕ್ತ ರಾಜ್ಯಕ್ಕಾಗಿ ಶ್ರಮಿಸೋಣ)
ಸಾರಿಗೆ ಇಲಾಖೆ

ಶ್ರೀ ನರೇಂದ್ರ ಮೋದಿ
ಗೌರವಾನ್ವಿತ ಪ್ರಧಾನ ಮಂತ್ರಿ, ಭಾರತ ಸರ್ಕಾರ

ಶ್ರೀ ಡಿ. ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು

ಡಾ. ಜಿ. ಪರಮೇಶ್ವರ
ಮಾನ್ಯ ಉಪಮುಖ್ಯಮಂತ್ರಿಗಳು



ರಹ್-ವೀರ್ ಯೋಜನೆ
• ಗುರುತಿಸುವಿಕೆ • ಪ್ರಶಂಸೆ • ಪುರಸ್ಕಾರ
"ನಿಮ್ಮ ಸಣ್ಣ ಮಾನವೀಯ ಕಾರ್ಯವು ಒಂದು ಅಮೂಲ್ಯ ಜೀವವನ್ನು ಉಳಿಸಬಹುದು"

ಯೋಜನೆಯ ಪ್ರಮುಖ ವೈಶಿಷ್ಟ್ಯಗಳು
ಕರುಣೆ, ಸಹಾನುಭೂತಿ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಉತ್ತೇಜಿಸುತ್ತದೆ.
ರಸ್ತೆ ಅಪಘಾತದ ಸಂತ್ರಸ್ತರ ಅಮೂಲ್ಯ ಜೀವಗಳನ್ನು ಉಳಿಸಲು ಮುಂದೆ ಬರುವವರನ್ನು ಗೌರವಿಸಿ ಪ್ರೋತ್ಸಾಹಿಸುತ್ತದೆ.
ಸುವರ್ಣ ಅವಧಿಯೊಳಗೆ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿ